# ಆತ್ಮಿಕವಾಗಿ ಮನಸ್ಸುಳ್ಳವರಾಗಿರುವುದು

# ಮತ್ತು ಲೌಕಿಕ ಜ್ಞಾನವಂತರಾಗಿರುವುದು

ಆಶಿಷ್ ರಾಯ್‌ಚೂರ್

ಉಚಿತವಾದ ಹಂಚಿಕೆಗಾಗಿ ಮಾತ್ರ

ಮುದ್ರಣ ಮತ್ತು ಹಂಚಿಕೆ : ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್‌ರೀಚ್, ಬೆಂಗಳೂರು

ಪ್ರಥಮ ಪ್ರತಿ : ಡಿಜಿಟಲ್ ಬಿಡುಗಡೆ ಸೆಪ್ಟೆಂಬರ್ 2020

ಕನ್ನಡಕ್ಕೆ ಭಾಷಾಂತರಿಸಿದವರು: ರವಿಕುಮಾರ್ ಎಂ.

ಮುಖಪುಟ ಮತ್ತು ವರ್ಣವಿನ್ಯಾಸ: ಕರುಣಾ ಜೆರೋಮ್, ಬ್ರೈಟ್ವೇಯ್ಸ್ ಡಿಸೈನ್ಸ್

**Contact Information:**
All Peoples Church & World Outreach,
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617
Email: bookrequest@apcwo.org
Website: apcwo.org

Unless otherwise indicated, all Scripture quotations are taken from the Holy Bible, New King James Version. Copyright © 1982 by Thomas Nelson, Inc., Used by permission. All rights reserved.

Scriptures marked as "(MSG)" are taken from THE MESSAGE: The Bible in Contemporary Language copyright 2002 by Eugene H. Peterson.

Scriptures marked as "(GNB)" are taken from the GNB – Second Edition © 1992 by American Bible Society. Used by permission.

**ಉಚಿತ ವಿತರಣೆಗಾಗಿ**

ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಸ್ನೇಹಿತರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ವಂದನೆಗಳು!

**ಮೇಲಿಂಗ್ ಪಟ್ಟಿ ಮತ್ತು ಉಚಿತ ಹೆಚ್ಚುವರಿ ಪುಸ್ತಕಗಳಿಗಾಗಿ**

ಹೊಸ ಪುಸ್ತಕಗಳು ಮುದ್ರಣವಾದಾಗ ಅವುಗಳನ್ನು ಪಡೆದುಕೊಳ್ಳಲು ದಯವಿಟ್ಟು ನಿಮ್ಮ ಸರಿಯಾದ ಅಂಚೆ ವಿಳಾಸ ಮತ್ತು ಯಾವ ಭಾಷೆಗಳಲ್ಲಿ ಪುಸ್ತಕಗಳು ಬೇಕೆಂಬುದನ್ನು ನಮ್ಮೊಂದಿಗೆ ಹಂಚಿಕೊಳ್ಳಿರಿ. ನಾವು ನಿಮ್ಮ ಸಭೆಯಲ್ಲಿ, ಸತ್ಯವೇದ ಅಧ್ಯಯನ ಗುಂಪು, ಸತ್ಯವೇದ ಶಾಲೆ, ಸೆಮಿನಾರ್ ಮುಂತಾದವುಗಳಿಗಾಗಿ ಹೆಚ್ಚಿನ ಪುಸ್ತಕಗಳನ್ನು ಕಳುಹಿಸಲು ನಾವು ಸಂತೋಷವುಳ್ಳವರಾಗಿದ್ದೇವೆ. ನಿಮಗೆ ಎಷ್ಟು ಪುಸ್ತಕಗಳು ಬೇಕೆಂಬುದನ್ನು ನಮಗೆ ತಿಳಿಸಿರಿ. ನಾವು ಅವುಗಳನ್ನು ನಿಮಗೆ ಕಳುಹಿಸುತ್ತೇವೆ.

(Kannada Book - Being Spiritually Minded & Earthlywise)

# ಆತ್ಮಿಕವಾಗಿ ಮನಸ್ಸುಳ್ಳವರಾಗಿರುವುದು

ಮತ್ತು

# ಲೌಕಿಕ ಜ್ಞಾನವಂತರಾಗಿರುವುದು

# ಪರಿವಿಡಿ


1. ಪೀಠಿಕೆ 1

2. ಕ್ರೈಸ್ತ ಜೀವನದಲ್ಲಿ ಒತ್ತಡ 3

3. ತಪ್ಪು ಆಯ್ಕೆಗಳು, ತಪ್ಪುಗಳು ಮತ್ತು ಅವುಗಳ ಪರಿಣಾಮಗಳು 6

4. ಆದುದರಿಂದ ಜ್ಞಾನವುಳ್ಳವರಾಗಿರಿ 8

5. ಆತ್ಮಿಕ ಆದರೂ ಪ್ರಾಯೋಗಿಕ 10

6. ಜ್ಞಾನ–ನಮ್ಮ ಸುರಕ್ಷತೆ 13

7. ದೇವರ ಒಳ್ಳೆಯತನ 15

# 1

# ಪೀಠಿಕೆ

ದೇವರನ್ನು ಪ್ರೀತಿಸುವವರು ಮತ್ತು ಆತನ ಉದ್ದೇಶಗಳಿಗನುಸಾರವಾಗಿ ಕರೆಯಲ್ಪಟ್ಟವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಒಳ್ಳೆಯದಾಗುತ್ತದೆಂಬುದು ನಮಗೆ ಗೊತ್ತಿದೆ. ಆದರೆ ಒಂದು ಕ್ರಮವಿಲ್ಲದ ಸಿದ್ಧತೆಯ ಕೊರತೆಯಿಂದಾಗಿ ಎದ್ದೇಳುವ ತಪ್ಪು ಆಯ್ಕೆಗಳು, ಮೂರ್ಖತನದ ತಪ್ಪುಗಳು, ಅನಪೇಕ್ಷಿತ ನಿರ್ಧಾರಗಳು, ಸೋಮಾರಿತನದ ಭೀಕರ ಪರಿಣಾಮಗಳು, ಇತರೆ ವಿಪತ್ತುಗಳ ಕುರಿತು ಏನು? ಕ್ರೈಸ್ತರ ಸ್ವಂತ ಕಾರ್ಯದ ನಿಮಿತ್ತದಿಂದ ಜರುಗುವಂತಹ ವಿಷಯಗಳ ಬಗ್ಗೆ ಏನು? ಆತ್ಮೀಕವಾಗಿದ ಮನಸ್ಸುಳ್ಳಂತಹ ಒಬ್ಬ ಕ್ರೈಸ್ತನು ಈ ಜೀವನದ ವ್ಯವಹಾರಗಳ ಬಗ್ಗೆ ತನ್ನನ್ನು ತಾನೇ ಶಿಕ್ಷಣ ಮಾಡಿಕೊಳ್ಳುವುದನ್ನು ನಿರ್ಲಕ್ಷಿಸಿರುವುದ ಕುರಿತು ಏನು? ಕ್ರೈಸ್ತರ ಸ್ವಂತ ಬೇಜವಾಬ್ದಾರಿಗಳಿಂದ ಜರುಗುವಂತಹ ಸಂಗತಿಗಳ ಕುರಿತು ಏನು? ಅಂತಹ ಸಂಗತಿಗಳು ಜರುಗಲು ದೇವರು ಕಾರಣ ಕರ್ತನೇ?

ಅಸಂಖ್ಯಾವಾದ ಕ್ರೈಸ್ತರು ಬಳಲುತ್ತಿರುವುದನ್ನು ಮತ್ತು ತಪ್ಪಿಸಿಕೊಳ್ಳಲಾಗದಂತಹ ಒತ್ತಡಗಳ ಮಧ್ಯದಲ್ಲಿ ಸಿಲುಕಿಕೊಂಡಿರುವುದನ್ನು ನಾವು ನೋಡುತ್ತೇವೆ. ಆತನ ಜನರು ಸಂಕಷ್ಟದ ಸಮಯಗಳನ್ನು ಹಾದುಹೋಗುವುದಕ್ಕೆ ದೇವರು ಅನುಮತಿ ನೀಡುತ್ತಾನೆ ಆದ್ದರಿಂದ ಅವರು ಬಲಹೊಂದಿದವರಾಗುತ್ತಾರೆ ಮತ್ತು ಅವುಗಳಿಂದ ಪ್ರಯೋಜನ ಪಡೆದುಕೊಳ್ಳುತ್ತಾರೆಂಬುದಾಗಿ ನಮ್ಮ ದೈವಶಾಸ್ತ್ರವು ವಿವರಿಸುತ್ತದೆ. ಆದರೆ ಅಂತಹ ಎಲ್ಲಾ ಬಳಲುವಿಕೆಯ ಅನುಭವಗಳ ಮತ್ತು ತೊಂದರೆಗಳು ದೇವರಿಂದ – ಪ್ರತಿಷ್ಟಿಸಲ್ಪಟ್ಟವುಗಳಾ?

ನಾವು ಒಂದು ಕ್ಷಣ ನಿಂತು ಅವುಗಳನ್ನು ಬಹಳ ಸಮೀಪದಿಂದ ಪರೀಕ್ಷಿಸಿದರೆ, ನಾವು ಸ್ಪಷ್ಟವಾದ ನಿರ್ಧಾರಗಳನ್ನು ಗುರ್ತಿಸಲು ಶಕ್ತರಾಗುತ್ತೇವೆ ಮತ್ತು ನಮ್ಮನ್ನು ನಾವೇ ಅವುಗಳೊಂದಿಗೆ ಕೆಲವು ಸಮಯಗಳಲ್ಲಿ ಗುರ್ತಿಸಿಕೊಳ್ಳುವಂತಹ ಸಂಕಟಗಳಿಗೆ ಅಂತಿಮವಾಗಿ ನಡೆಯುವಂತಹ ತೀರ್ಮಾನಗಳನ್ನು ಮಾಡುತ್ತೇವೆ. ಅವು ನಮ್ಮ ತಪ್ಪು ನಿರ್ಧಾರಗಳು–ಅವು ಯಾವುದೇ ಶೈಲಿಗಳಲ್ಲಿರಬಹುದು–ಅದು

ನಾವು ಎದುರಿಸುತ್ತಿರುವಂತಹ ದುರ್ಘಟನೆಗಳಿಗೆ ಕಾರಣವಾಗಿವೆ. ನಮ್ಮ ಅನುಭವಗಳನ್ನು ಆತ್ಮಿಕಗೊಳಿಸಬೇಕಾ ಮತ್ತು ಅಂತಹ ಬಳಲುವಿಕೆಗಳಿಗೆ ದೇವರನ್ನು ಹೊಣೆಗಾರನನ್ನಾಗಿ ಮಾಡಬೇಕೆ? ನಾವು ಅಪರಿಪೂರ್ಣವಾಗಿರುವುದರಿಂದ ತಪ್ಪುಗಳನ್ನು ಮಾಡುತ್ತೆವೆಂಬುದು ಸತ್ಯಕರವಾಗಿದೆ. ನಾವು ಮೊದಲು ಬಾರಿಗೆ ಎದುರುಗೊಳ್ಳುವ ಪರಿಸ್ಥಿತಿಯಲ್ಲಿನ ತಪ್ಪಾದ ನ್ಯಾಯ ತೀರ್ಪುಗಳು ತೀವ್ರವಾದ ಪರಿಣಾಮಗಳನ್ನು ಹೊಂದಿರುತ್ತವೆ. ದೇವರು ನಮಗಾಗಿ ಇಟ್ಟಿರುವ ಯೋಜನೆಗಳನ್ನು ನಮ್ಮ ತಪ್ಪು ಆಯ್ಕೆಗಳು ಹೇಗೆ ಹಾನಿಗೊಳಿಸುತ್ತವೆ? ನಮ್ಮ ಸ್ವಂತ ತಪ್ಪುಗಳು, ದೇವರ ಶ್ರೇಷ್ಟವಾದದು ಮತ್ತು ಉತ್ತಮವಾದದು ನಮ್ಮ ಜೀವಿತದಲ್ಲಿ ನೆರವೇರುವುದನ್ನು ಯಾವುದಾದರೂ ರೀತಿಯಲ್ಲಿ ಅಡ್ಡಿಪಡಿಸುತ್ತವೆ ಅಥವಾ ಬದಲಾಯಿಸುತ್ತವೆ ಸೋಲುವಂತೆ ಮಾಡುತ್ತವೆ. ನಮ್ಮ ಕ್ರೈಸ್ತ ನಂಬಿಕೆಯ ಪ್ರಾಯೋಗಿಕ ಕಡೆಗೆ ನಮ್ಮನ್ನು ಜಾಗೃತಗೊಳಿಸುವ ಉದ್ದೇಶವನ್ನು ಈ ಪುಸ್ತಕವು ಹೊಂದಿದೆ. ನಮ್ಮ ಜೀವಿತಗಳಿರುವ ದೇವರ ಉದ್ದೇಶವನ್ನು ನೆರವೇರಿಸುವ ನಮ್ಮ ಮಹತ್ವಪೂರ್ಣ ಜವಾಬ್ದಾರಿಯನ್ನು ಅರ್ಥ ಮಾಡಿಸಲೂ ಇದು ಉದ್ದೇಶಸಿಲ್ಪಟ್ಟಿದೆ. ನಮ್ಮ ಕ್ರಿಯೆಗಳನ್ನು ಆಧ್ಯಾತಿಕೀಕರಣಗೊಳಿಸುವುದನ್ನು ನಿಲ್ಲಿಸುವುದಕ್ಕೆ ಇದು ಒಂದು ಕರೆಯಲಾಗಿದೆ. ಈ ಜೀವನದ ವ್ಯವಹಾರದಲ್ಲಿ ''ಜ್ಞಾನವಂತನಾಗಲು'' ಬುದ್ಧಿ ಹೇಳುವಂತದ್ದು ಇದಾಗಿದೆ.

**ಜೀವನದಲ್ಲಿ ನಾವು ಮಾಡುವಂತಹ ನಿರ್ಧಾರಗಳು ಮತ್ತು ಆಯ್ಕೆಗಳು, ಕೆಲವು ಸಮಯಗಳಲ್ಲಿ ನಾವೇ ಅವುಗಳಲ್ಲಿ ಸಿಕ್ಕಿಕೊಳ್ಳುವಂತಹ ಸಂಕಟಗಳಿಗೆ ಅಂತಿಮವಾಗಿ ನಮ್ಮನ್ನು ನಡೆಸುತ್ತವೆ.**

# 2

# ಕ್ರೈಸ್ತ ಜೀವನದಲ್ಲಿ ಒತ್ತಡ

ಕೊಲೊಸ್ಸೆಯವರಿಗೆ 3:1,2

**ಆದಕಾರಣ ನೀವು ಕ್ರಿಸ್ತನೊಂದಿಗೆ ಎಬ್ಬಿಸಲ್ಪಟ್ಟಿರುವುದರಿಂದ ಮೇಲಿರುವವುಗಳನ್ನು ಹುಡುಕಿರಿ ಅಲ್ಲಿ ಕ್ರಿಸ್ತನು ದೇವರ ಬಲಗಡೆಯಲ್ಲಿ ಆಸನಾರೂಢನಾಗಿದ್ದಾನೆ. ಮೇಲಿರುವಂತವುಗಳ ಮೇಲೆ ಮನಸ್ಸಿಡಿರಿ, ಭೂಸಂಬಂಧವಾದವುಗಳ ಮೇಲೆ ಇಡಬೇಡಿರಿ.**

ದೇವರ ರಾಜ್ಯಕ್ಕೆ ವಿರುದ್ಧವಾಗಿರುವಂತಹ ಸಂಪೂರ್ಣವಾದ ಇನ್ನೊಂದು ರಾಜ್ಯದ ಜನರುಗಳ ಮಧ್ಯದಲ್ಲಿ ಜೀವಿಸುವಾಗ ''ಮೊದಲೂ ದೇವರ ರಾಜ್ಯವನ್ನು ಹುಡುಕುವಂತಹ'' ಪ್ರಯತ್ನಗಳನ್ನು ಮಾಡುವಾಗ ಕ್ರಿಸ್ತೀಯ ಜೀವನದಲ್ಲಿ ದೃಢವಾದ ಒತ್ತಡವಿರುತ್ತದೆಂಬುದಾಗಿ ಕಾಣಿಸುತ್ತದೆ. ನಾವು ಭೂಲೋಕದಲ್ಲಿದ್ದೇವೆ, ಆದರೆ ನಾವುಗಳು ಪರಲೋಕದಲ್ಲಿನ ಮೇಲಿರುವವುಗಳನ್ನು ಹುಡುಕುವಂತವರಾಗಿರಬೇಕು. ಭೂಮಿಯ ಮೇಲೆ ವಾಸಿಸುವುದರಿಂದ ಒಂದು ವೃತ್ತಿಜೀವನ ಕಟ್ಟಿಕೊಳ್ಳುವುದು ಯಶಸ್ಸು ಸಾಧಿಸಿದಂತಹ ''ಯಾರಾದರೂ ಒಬ್ಬನಾಗಿ'' ಕಂಡು ಬರುವುದು, ಭರ್ಜರಿ ಸಂಪತ್ತುಗಳಿಸುವುದು ಆದಾಗ್ಯೂ ಬಹುತೇಕ ನಿರಂತರ ವ್ಯಾಪಾರ ವ್ಯವಹಾರಗಳ ಮಧ್ಯದಲ್ಲಿ, ನಮ್ಮ ಮನಸ್ಸು–ನಮ್ಮ ಆಕರ್ಷಣೆಗಳು, ನಮ್ಮ ಆಸಕ್ತಿಗಳು, ನಮ್ಮ ಆಶೆಗಳು, ನಮ್ಮ ಅನ್ವೇಷಣೆಗಳನ್ನು – ಮೇಲಿರುವವಗಳ ಮೇಲೆ ಇರಿಸಲೂ ಪ್ರೇರಿಸಲ್ಪಟ್ಟಿರುವಂತದು ನಮ್ಮ ಅದ್ಭುತಕರವಾದ ಜವಾಬ್ದಾರಿಗಳಾಗಿವೆ!! ಆತ್ಮಿಕತೆಯನ್ನು ವಿಸ್ತರಿಸುವಂತಹ ಯಾವುದೇ ಸತ್ಯವಾದ ಸವಾಲುಗಳಿದ್ದರೆ, ಒಬ್ಬ ವ್ಯಕ್ತಿಯ ಮಾನಸಿಕ ಮತ್ತು ಭಾವನಾತ್ಮಕ ಯೋಗ್ಯತೆಗಳಿದ್ದರೆ ಇದು ಹಾಗೆ ತೋರುತ್ತದೆ!! ಆದರೆ ನಾವು ನೆರವೇರಿಸಲೂ ಸಾಧ್ಯವಾಗದಂತಹ ಯಾವುದಾದರೂ ಸವಾಲುಗಳನ್ನು ದೇವರು ನೀಡುವುದಿಲ್ಲ, ನಾವು ಪ್ರತ್ಯೇಕಿಸಿಕೊಳ್ಳದೇ–ನಮ್ಮ ಹತ್ತಿರದಲ್ಲಿಯೇ ಒಳಗಡೆ ಇರುತ್ತೆವೆ ಎಂದು ಆತನು ತಿಳಿದು ನಮಗೆ ಇಂತಹ ಆಜ್ಞೆ ಕೊಟ್ಟಿದ್ದಾನೆ ಆದರೆ ಆತನ ಪೂರೈಸುವ ಶಕ್ತಿಯಿಂದ–ಇದನ್ನು ಇರಿಸಿಕೊಳ್ಳಬೇಕು! ಅದೇನೇ ಇದ್ದರೂ, ವಾಸ್ತವವಾಗಿ ''ನಿಜ'' ಪ್ರಪಂಚದಲ್ಲಿರುವ ಪ್ರತಿಯೊಬ್ಬ ಪರಿಪಕ್ವಕ್ರೈಸ್ತನ ಕಾರ್ಯ ವೈಖರಿಯಲ್ಲಿ ಈ

ಆಜ್ಞೆಯು ನಮ್ಮ ಜೀವಿತಗಳಿಗೆ ಆದೇಶಿಸಲ್ಪಡುವುದರಿಂದ ಇದು ''ಒತ್ತಡಗಳನ್ನು'' ತರುವುದನ್ನು ಖಚಿತವಾಗಿ ಗುರುತಿಸಬೇಕು.

ಎರಡು ದಿಕ್ಕುಗಳಲ್ಲಿ ''ಎಳೆಯಲ್ಪಟ್ಟಂತಹ'' ಅನುಭವ ಪಡೆದ ಪ್ರತಿದಿನ ಜೀವನ ಮಾಡುವುದರಲ್ಲಿ ಅಸಂಖ್ಯವಾದ ''ಸಮಸ್ಯೆಗಳು'' ಕ್ರೈಸ್ತರಾದ ನಮಗಿವೆ. ಉದಾಹರಣೆಗೆ ಜಯದ ಸತ್ಯವಾದ ಅಳತೆಯ ಪ್ರಮಾಣಗಳೇನು? ಜಯವು ಸಾಧನೆಗಳು ಮತ್ತು ಗಳಿಸಿದ ಸಂಪತ್ತು ಎಂಬ ಅಂಶದಲ್ಲಿ ಅಳೆಯಲ್ಪಟ್ಟಂತಹ ತಾತ್ಕಾಲಿಕ ಗುಣಮಟ್ಟವಾಗಿದೆ, ಹಾಗೆಯೇ ದೇವರ ರಾಜ್ಯದಲ್ಲಿನ ಯಶಸ್ಸು ಒಬ್ಬನು ತಂದೆಯ ಚಿತ್ತವನ್ನು ನೆರವೇರಿಸುತ್ತಾನೋ ಅಥವಾ ಇಲ್ಲವೋ ಎಂಬುದರ ಮೇಲೆ ನಿರ್ಧರಿಸಲಾಗುತ್ತದೆ. ಲೌಕಿಕ ಸಾಧನೆಗಳು ಮತ್ತು ಸಂಪತ್ತನ್ನು ಸಂಪಾದಿಸುವುದರಲ್ಲಿ ಯಾವುದೇ ತಪ್ಪಿಲ್ಲ ಆದರೆ ''ನನ್ನ ನಿಮಿತ್ತವಾಗಿ ತನ್ನ ಪ್ರಾಣವನ್ನು ಕಳಕೊಂಡವನು ಅದನ್ನು ಕಂಡುಕೊಳ್ಳುವನು'' (ಮತ್ತಾಯ 16:25) ಎಂಬಂತಹ ಒಂದು ಅತ್ಯುನ್ನತವಾದ ದೇವರ ಕರೆಗೆ ನಮ್ಮನ್ನು ಕರೆಯುತ್ತಾನೆ. ಆದ್ದರಿಂದ್ದ ಒಬ್ಬನು ಲೌಕಿಕವಾದ ಹೆಚ್ಚಳವಾದ ಅಳತೆಯ ಯಶಸ್ಸು ನೀಡುವ ದಾರಿ ಅಥವಾ ಕ್ರಿಸ್ತನಲ್ಲಿ ಒಬ್ಬನು ಹೊಂದಿರುವ ದೇವರ ಉನ್ನತವಾದ ಕರೆಯನ್ನು ನೆರವೇರಿಸುವ ಕಡೆಗೆ ಮುನ್ನೆಡೆಸುವ ದಾರಿ ಇವೆರಡು ದಾರಿಯಲ್ಲಿ ಯಾವುದು ಬೇಕೆಂಬುದನ್ನು ಜೀವಿತದಲ್ಲಿ ತೀರ್ಮಾನಿಸುವಾಗ ಕ್ರೈಸ್ತರು ನಿರಂತರವಾದ ಸವಾಲುಗಳನ್ನು ಎದುರಿಸುತ್ತಾರೆ.

ಅನೇಕ ''ಹೋರಾಟದ ಕ್ಷೇತ್ರಗಳು'' ಜೊತೆಗೆ ಕ್ರೈಸ್ತರು ಅವರ ಭೂಲೋಕ ತೀರ್ಥಯಾತ್ರೆಯ ಅವಧಿಯಲ್ಲಿ ಪ್ರಪಂಚ ಮತ್ತು ದುರಾತ್ಮನೊಡನೆ ಸೆಣಸಾಟದಲ್ಲಿರಬೇಕು. ''ಯಾಕೆಂದರೆ ಲೌಕಿಕರು ತಮ್ಮಂಥವರ ವಿಷಯದಲ್ಲಿ ಬೆಳಕಿನ ರಾಜ್ಯದವರಿಗಿಂತಲೂ ಜಾಣರಾಗಿದ್ದಾರೆ'' (ಲೂಕ 16:8) ಎಂಬುದಾಗಿ ಯೇಸುವು ಹೇಳಿದ್ದಾನೆ. ಇದು ಇರಬಾರದು ಆದರೆ ವಿಶೇಷವಾಗಿ ಬೆಳಕಿನ ರಾಜ್ಯದ ಮಕ್ಕಳುಗಳು, ತಂದೆಯು ಅವರಿಗೆ ದೊರೆಯುವಂತೆ ಮಾಡಿರುವ ದೈವಿಕ ಜ್ಞಾನದ ನಿಬಂಧನೆಗಳನ್ನು ಹಿಡಿದಿಟ್ಟುಕೊಳ್ಳುವುದರಲ್ಲಿ ಸೋತು ಹೋದಾಗ ಕೆಲವು ಸಮಯಗಳಲ್ಲಿ ವಿಷಯಗಳು ಅದೇ ರೀತಿಯಲ್ಲಿರುತ್ತವೆ. ಕ್ರೈಸ್ತರು ಸಂಬಂಧಿಸಿಕೊಳ್ಳಲೂ, ಜೊತೆಗೆ ಕಾರ್ಯ ಮಾಡಲೂ ಮತ್ತು ಇತರೆ ಪ್ರಕರಣಗಳಲ್ಲಿ ಪ್ರತಿದಿನದ ಜೀವನ ಕ್ರಮದ ಚಟುವಟಿಕೆಗಳಲ್ಲಿ ''ಈ ಲೋಕದ ಪುತ್ರರೊಂದಿಗೆ'' ಸ್ಪರ್ಧಿಸಬೇಕಾಗುತ್ತದೆ. ಜೊತೆಗೆ ಕ್ರೈಸ್ತರು ಎದುರಾಳಿಯ ಯೋಜನೆ ಕುಯುಕ್ತಿಗಳಿಗೆ ಗುರಿಗಳು ಆಗಿದ್ದಾರೆ. ದುರಾತ್ಮನು ಶೋಧನೆಗೆ ಒಳಪಡಿಸುವುದರಲ್ಲಿ ಆನಂದಿಸುತ್ತಾನೆ

ಮತ್ತು ದೇವರ ಉನ್ನತವಾದ ಮತ್ತು ಉತ್ತಮವಾದವುಗಳಿಂದ ಕ್ರೈಸ್ತರನ್ನು ದೂರ ಮಾಡಿ ದಾರಿತಪ್ಪಿಸುವ ಪ್ರಯತ್ನದಲ್ಲಿ ತೊಂದರೆ ಪಡಿಸುತ್ತಾನೆ.

**ದೈನಂದಿನ ಜೀವನದಲ್ಲಿ ಹಲವಾರು ''ಸಮಸ್ಯೆಗಳು'' ಇವೆ, ಕ್ರೈಸ್ತರು ಎರಡು ದಿಕ್ಕುಗಳಲ್ಲಿಯೂ ''ಎಳೆಯಲ್ಪಟ್ಟಿದ್ದೇನೆ'' ಎಂಬುದಾಗಿ ಭಾವಿಸುತ್ತಾರೆ.**

# 3

# ತಪ್ಪು ಆಯ್ಕೆಗಳು, ತಪ್ಪುಗಳು ಮತ್ತು ಅವುಗಳ ಪರಿಣಾಮಗಳು

ಗಲಾತ್ಯದವರಿಗೆ 6:7, 8

**ಮೋಸ ಹೋಗಬೇಡಿರಿ. ದೇವರು ತಿರಸ್ಕಾರ ಸಹಿಸುವವನಲ್ಲ ಮನುಷ್ಯನು ತಾನು ಏನು ಬಿತ್ತುತ್ತಾನೋ ಅದನ್ನೇ ಕೊಯ್ಯಬೇಕು ತನ್ನ ಶರೀರಭಾವವನ್ನು ಕುರಿತು ಬಿತ್ತುವವನು ಆ ಭಾವದಿಂದ ನಾಶನವನ್ನು ಕೊಯ್ಯುವನು ಆತ್ಮನನ್ನು ಕುರಿತು ಬಿತ್ತುವವನು ಆತ್ಮನಿಂದ ನಿತ್ಯ ಜೀವವನ್ನು ಕೊಯ್ಯುವನು.''**

ಇವುಗಳ ಮಧ್ಯದಲ್ಲಿ ಮತ್ತು ಇತರೆ ''ಒತ್ತಡಗಳು'' ದುರಾತ್ಮನ ಶೋಧನೆಗಳು ಮತ್ತು ಲೌಕಿಕ ಅಭಿಲಾಷೆಗಳನ್ನು ಇದರಲ್ಲಿ ಸೇರಿಸಿದೆ; ಕ್ರೈಸ್ತರು ತಪ್ಪುಗಳನ್ನು ಮಾಡುವ ಸಾಧ್ಯತೆಯಿದೆ. ಇದನ್ನು ವ್ಯಾಖ್ಯಾನಿಸುವುದು ನಕಾರಾತ್ಮಕ ಮತ್ತು ಬಹುತೇಕ ನಿರಾಶಾವಾದದಂತೆ ತೋರುತ್ತದೆ. ಆದಾಗ್ಯೂ ಜೀವಿತದಲ್ಲಿ ಕೆಲವು ಸಮಯಗಳಲ್ಲಿ ನಾವು ತಪ್ಪು ಆಯ್ಕೆಗಳನ್ನು ಮತ್ತು ಕೆಟ್ಟ ತೀರ್ಮಾನಗಳನ್ನು ಮಾಡುತ್ತೇವೆ. ಜೊತೆ ಸಂಗಾತಿಯನ್ನು ಆರಿಸಿಕೊಳ್ಳುವಾಗ ಅನೇಕ ವಿಶ್ವಾಸಿಗಳು ರಾಜಿ ಮಾಡಿಕೊಂಡಿರುವುದನ್ನು ಆಲೋಚಿಸಿರಿ ಶೈಕ್ಷಣಿಕ, ವೃತ್ತಿಪರ ಆಯ್ಕೆಗಳು, ನಿವಾಸದ ಸ್ಥಳ, ಸ್ನೇಹಿತರು, ಹಣಕಾಸಿನ ನಿರ್ವಹಣೆ ಹವ್ಯಾಸಗಳು ಮತ್ತು ಇಷ್ಟಕರವಾಗಿರುವಂತಹವುಗಳಿಗೆ. ಸಂಬಂಧಿಸಿದ ಅನೇಕ ತೀರ್ಮಾನಗಳನ್ನು ವಿಚಾರ ಮಾಡಿರಿ. ಒಬ್ಬನು ಪರಲೋಕದ ಕರೆಯನ್ನು ನೆರವೇರಿಸಲೂ ಮತ್ತಷ್ಟು ಮುಂದುವರೆಯುವಾಗ, ವಿಷಯಗಳು ತುಂಬಾ ಗಂಭೀರವಾದವುಗಳಾಗಿ ಕಾಣಿಸುತ್ತವೆ ಯಾಕೆಂದರೆ ಒಬ್ಬರ ಜೀವನದ ಪ್ರತಿಯೊಂದು ನಿರ್ಧಾರವು – ಎಲ್ಲಿ, ಯಾವಾಗ, ಏನು ಮತ್ತು ಹೇಗೆ ಒಬ್ಬನು ಇನ್ನೊಬ್ಬನ ಜೀವನದ ಪ್ರತಿಯೊಂದು ವಿವರಗಳು ಆದೇಶಿಸುತ್ತಾನೆ ಎಂಬುದು ಭೂಮಿಯ ಮೇಲೆ ದೇವರ ರಾಜ್ಯದ ಮೇಲೆ ತನ್ನದೇ ಪ್ರಭಾವ ಹೊಂದಿದೆ ಎಂಬುದನ್ನು ಮನದಟ್ಟು ಮಾಡಿಕೊಳ್ಳಲೂ ಪ್ರಾರಂಭಿಸುತ್ತಾನೆ.

ಎಲ್ಲಾ ನಮ್ಮ ನಿರ್ಧಾರಗಳು ಪ್ರಾಯಶ್ಚಿತ್ತಗಳನ್ನು ಹೊಂದಿವೆ. ನಮ್ಮಲ್ಲಿ ಕೆಲವರು, ವಿಚಾರಗಳ ಗಂಭೀರತೆಯನ್ನು ಅರಿತುಕೊಳ್ಳುವುದಿಲ್ಲ. ನಮ್ಮ ದೇವರು ಕೃಪೆಯುಳ್ಳ ದೇವರು ಎಂಬುದಾಗಿ ಅರಿತವರಾಗಿ, ಪ್ರಜ್ಞಾ ಪೂರ್ವಕವಾಗಿ ಅಥವಾ ಪ್ರಜ್ಞೆಯಿಲ್ಲದವರಾಗಿ ಇದರ ಅನುಕೂರತೆಯನ್ನು'' ತೆಗೆದುಕೊಳ್ಳುತ್ತೇವೆ. ಹೌದು ದೇವರ ರಾಜ್ಯದಲ್ಲಿರುವುದೆಲ್ಲವೂ ಕೃಪೆಯಿಂದಲೇ ಇರುವುದಾಗಿದೆ. ಆದಾಗ್ಯೂ ನಮ್ಮ ಮೇಲೆ ದೇವರು ಕೆಲವು ನಿರ್ದಿಷ್ಟ ಜವಾಬ್ದಾರಿಗಳನ್ನು ಇರಿಸಿದ್ದಾನೆ. ನಮಗೆ ಕಲಿಸಲಾದ ಸತ್ಯಗಳಿಂದ ಜೀವನ ಮಾಡುವುದು ನಮ್ಮ ಜವಾಬ್ದಾರಿಯಾಗಿದೆ. ನಾವು ಮಾಡುವಂತಹವುಗಳಲ್ಲಿ ಸೋಮಾರಿತನವನ್ನು ತಪ್ಪಿಸಲು ಮತ್ತು ಶ್ರಮದಾಯಕವಾಗಿ ಕೆಲಸ ಮಾಡುವುದು ನಮ್ಮ ಜವಾಬ್ದಾರಿಯಾಗಿದೆ. ನಮ್ಮ ಶರೀರವನ್ನು ಶಿಲುಬೆಗೆ ಹಾಕುವುದು ಮತ್ತು ದುರಾತ್ಮನ ಮತ್ತು ಲೋಕದ ಶೋಧನೆಗಳನ್ನು ಎದುರಿಸುವುದು ನಮ್ಮ ಜವಾಬ್ದಾರಿಯಾಗಿದೆ. ಇಂತಹವುಗಳನ್ನು ಕರ್ತನು ನಮಗಾಗಿ ಮಾಡುವುದಿಲ್ಲ. ಆತನು ನಮಗೆ ಜ್ಞಾನವನ್ನು ಒದಗಿಸುತ್ತಾನೆ (ಅದಕ್ಕಾಗಿ ಆತನನ್ನು ನಾವು ಹುಡುಕಿದರೆ) ಆದರೆ ಮಾಡುವಂತಹ ನಿರ್ಧಾರಗಳು ನಮ್ಮವುಗಳಾಗಿರಬೇಕು ಮತ್ತು ನಾವು ಮಾಡುವಂತಹ ನಿರ್ಧಾರಗಳಲ್ಲಿ ಪ್ರಾಯಶ್ಚಿತ್ತ (ಪರಿಣಾಮಗಳನ್ನು) ಎದುರಿಸಲೂ ನಾನು ಸಿದ್ದರಾಗಿರಬೇಕು.

**ದೇವರ ರಾಜ್ಯದಲ್ಲಿ ಎಲ್ಲವೂ ಕೃಪೆಯಿಂದಲೇ ಇವೆ, ಆದಾಗ್ಯೂ ಕರ್ತನು ನಮ್ಮ ಮೇಲೆ ನಿರ್ದಿಷ್ಟ ಜವಾಬ್ದಾರಿಗಳನ್ನು ಇರಿಸಿದ್ದಾನೆ. ನಮಗೆ ಕಲಿಸಿದ ಸತ್ಯಗಳಿಂದ ಜೀವನ ಮಾಡುವುದು ನಮ್ಮ ಜವಾಬ್ದಾರಿಯಾಗಿದೆ.**

# 4

# ಆದುದರಿಂದ ಜ್ಞಾನವುಳ್ಳವರಾಗಿರಿ

ಮತ್ತಾಯ 10:16

**ನೋಡಿರಿ ತೋಳಗಳ ನಡುವೆ ಕುರಿಗಳನ್ನು ಹೋಗಿಸಿದಂತೆ ನಾನು ನಿಮ್ಮನ್ನು ಕಳುಹಿಸಿಕೊಡುತ್ತೇನೆ. ಆದದರಿಂದ ಸರ್ಪಗಳಂತೆ ಜಾಣರೂ ಪಾರಿವಾಳಗಳಂತೆ ನಿಷ್ಕಪಟಿಗಳು ಆಗಿರ್ರಿ.**

ಕುರಿಗಳು-ದೇವರ ಜನರು-ನಿರ್ದಿಷ್ಟವಾಗಿ ಒಂದು ಸ್ನೇಹಭಾವದ ಪರಿಸರದಲ್ಲಿಲ್ಲ. ಇದರ ಕುರಿತು ನಮ್ಮನ್ನು ಎಚ್ಚರಿಸಲೂ, ''ಸರ್ಪಗಳಂತೆ ಜಾಣರೂ ಪಾರಿವಾಳಗಳಂತೆ ನಿಷ್ಕಪಟಿಗಳು'' ಆಗಿರಿ ಎಂಬುದಾಗಿ ಕರ್ತನಾದ ಯೇಸುವು ಉಪದೇಶಿಸಿದ್ದಾನೆ. ಪ್ರಪಂಚವು ಬಹಳ ಕೆಟ್ಟದಾಗಿ ಮತ್ತು ಹಗೆಯುಳ್ಳದ್ದಾಗಿರಬಹುದು. ಇದರ ದುಷ್ಟತನಕ್ಕೆ ನಾವು ದುಷ್ಟತನವುಳ್ಳವರಾಗಿ ಹೊಂದಾಣಿಕೆ ಮಾಡಿಕೊಳ್ಳಬೇಕಾಗಿಲ್ಲ, ಬದಲಿಗೆ ನಾವುಗಳು ''ಒಳ್ಳೇತನದಿಂದ ಕೆಟ್ಟತನವನ್ನು ಸೋಲಿಸಬೇಕು'' (ರೋಮಾಪುರದವರಿಗೆ 12:21). ನಾವು ಕೃಪೆಯಲ್ಲಿ ಮತ್ತು ಕ್ರಿಸ್ತನ ಸದ್ಗುಣಗಳಲ್ಲಿ ನಡೆಯುವವರಾಗಿರಬೇಕು. ಸ್ನೇಹ ಪರವಲ್ಲದ ಲೋಕದ ಮಧ್ಯದಲ್ಲಿ ನಾವುಗಳು ಪಾರಿವಾಳಗಳಂತೆ ನಿಷ್ಕಪಟಿಗಳು ಆಗಿರಬೇಕೆಂಬುದಾಗಿ ಆತನು ಪ್ರೇರಿಸಿದ್ದನ್ನು ಯೇಸುವೂ ಅರ್ಥೈಸಿದ್ದು ಇದೆ ಆಗಿದೆ. ಯೇಸುವಿನ ಇನ್ನೊಂದು ಒತ್ತಿ ಹೇಳಿದ ಅಂಶವು ಸರ್ಪಗಳಂತೆ ಜಾಣರಾಗಿರಬೇಕೆಂಬುದಾಗಿದೆ. ಈ ಒಂದು ಪ್ರಪಂಚದಲ್ಲಿ ನಾವು ಜೀವಿಸುವಾಗ, ನಾವು ಜಾಣರೂ ಮತ್ತು ದೂರದೃಷ್ಟಿಯುಳ್ಳವರಾಗಿರಬೇಕು. ನಿರ್ದಿಷ್ಟವಾಗಿ ಈ ಜೀವನದ ವ್ಯವಹಾರಗಳ ಕುರಿತು ಜ್ಞಾನ ಮತ್ತು ತಿಳುವಳಿಕೆಯಿಂದ ನಮ್ಮ ಆತ್ಮಿಕತೆಯನ್ನು ಜೋಡಿಸಿಕೊಳ್ಳಬೇಕು. ಈ ಪ್ರಪಂಚದಲ್ಲಿನ ಜನರುಗಳು ಬಹುತೇಕ ಆಗಾಗ್ಗೆ ನಮ್ಮ ಆತ್ಮಿಕತೆಯಿಂದ ಮೆಚ್ಚಿಸಲ್ಪಡುವುದಿಲ್ಲ. ವಾಸ್ತವವಾಗಿ, ಅನೇಕ ಜನರು ಆತ್ಮಿಕವಾಗಿ ಮನಸ್ಸುಳ್ಳ ಕ್ರೈಸ್ತರನ್ನು ಆಳವಾದ ನಿರ್ಲಕ್ಷ್ಯದಿಂದ ಮತ್ತು ತಿರಸ್ಕಾರದಿಂದ ಹಿಡಿದಿರುತ್ತಾರೆ. ಆದುದರಿಂದ ನಾವು ಲೋಕದಲ್ಲಿ ಬದುಕುಳಿಯಬೇಕಾದರೆ ಮತ್ತು ವಿಜಯಶಾಲಿಗಳಾಗಿ ಜೀವಿಸಬೇಕಾದರೆ ಇದು ಸ್ವಲ್ಪ ಜ್ಞಾನವನ್ನು ತೆಗೆದುಕೊಳ್ಳುತ್ತದೆ.

**ಸರ್ಪಗಳಂತೆ ಜಾಣರೂ ಮತ್ತು ಪಾರಿವಾಳಗಳಂತೆ ನಿಷ್ಕಪಟಿಗಳು ಆಗಿರ್ರಿ.**

5

# ಆತ್ಮಿಕ ಆದರೂ ಪ್ರಾಯೋಗಿಕ

ಆತ್ಮಿಕವಾಗಿ ಇರುವಂತದ್ದು ಅತ್ಯಂತ ತುಂಬಾ ಉತ್ತಮವಾದದು ಮತ್ತು ಪ್ರಾಮುಖ್ಯವಾದದು, ಆದರೂ ನಾವುಗಳು ಪ್ರಾಯೋಗಿಕವಾಗಿರುವಂತದ್ದು ಅವಶ್ಯವಾಗಿದೆ. ಆತ್ಮಿಕವಾಗಿ ಇರುವಂತದ್ದು ದೇವರ ಉದ್ದೇಶವನ್ನು ನೆರವೇರಿಸುವುದರಲ್ಲಿ ಮತ್ತು ಭೂಮಿಯ ಮೇಲೆ ಕರ್ತನಿಗಾಗಿ ಅಧಿಕವಾದದ್ದನ್ನು ಸಾಧಿಸುವುದರಲ್ಲಿ ಒಬ್ಬನ ಯಶಸ್ಸನ್ನು ಖಾತರಿಸಿಕೊಳ್ಳಲೂ ಸಾಧ್ಯವಿಲ್ಲ. ಒಬ್ಬನು ಪ್ರಾಯೋಗಿಕ ಜ್ಞಾನ ಮತ್ತು ತಿಳುವಳಿಕೆಯೊಡನೆ ಆತ್ಮಿಕತೆಯನ್ನು ಸೇರಿಸಿಕೊಳ್ಳಬೇಕು. ಉದಾಹರಣೆಗೆ ನೀವು ಒಬ್ಬ ಕ್ರೈಸ್ತನಾಗಿರುವುದರಿಂದ ನಿಮ್ಮ ಮದುವೆಯು ಯಶಸ್ಸು ಸಾಧಿಸಲೂ ಖಾತರಿ ನೀಡುತ್ತದೆ ಎಂಬುದು ಅರ್ಥವಲ್ಲ. ನಿಮ್ಮ ವಿವಾಹ ಮತ್ತು ಕುಟುಂಬ ಕಟ್ಟಲೂ ಪ್ರಾಯೋಗಿಕ ಸಮಸ್ಯೆಗಳು ಮತ್ತು ಒಂದು ಸಂತೋಷಭರಿತ ಮನೆಯನ್ನು ಕಟ್ಟಲೂ ಆ ತಿಳುವಳಿಕೆ ಅನ್ವಯವನ್ನು ನೀವು ಅರ್ಥ ಮಾಡಿಕೊಳ್ಳುವುದು ಅಗತ್ಯವಾಗಿದೆ. ಅದೇ ರೀತಿಯಾಗಿ ಹಣಕಾಸಿನಲ್ಲಿ ಸಮೃದ್ಧಿಯನ್ನು ಎದುರು ನೋಡಲೂ ಕಾಣಿಕೆಗಳನ್ನು ಕೊಡುವುದು ಮತ್ತು ದಶಮ ಭಾಗ ಕೊಡುವುದು ಸಾಕಾಗುವುದಿಲ್ಲ. ಇದರ ಜೊತೆಗೆ ನಿಮ್ಮ ಉಳಿದಂತಹ ಹಣವನ್ನು ಜ್ಞಾನವಂತರಾಗಿ ಹೇಗೆ ಉಪಯೋಗಿಸಬೇಕು ಮತ್ತು ಹೇಗೆ ಕ್ರಮದಲ್ಲಿರಿಸಬೇಕೆಂಬುದನ್ನು ನೀವು ಕಲಿಯಬೇಕು.

ದೇವರು ಆತನ ಮಕ್ಕಳನ್ನು ದೈವಿಕ ಆರೋಗ್ಯದೊಡನೆ ಆಶೀರ್ವದಿಸುತ್ತಾನೆ ಮತ್ತು ದೇವರು ಗುಣಪಡಿಸುತ್ತಾನೆ ಎಂಬುದಾಗಿ ನೀವು ನಂಬುವುದರ ನಿಮಿತ್ತದಿಂದ ಎಂಬುದು ನಿಮ್ಮ ಊಟದ ಹವ್ಯಾಸಗಳಲ್ಲಿ ಅಶಿಸ್ತು ಹೊಂದಿರುವುದು ಅಥವಾ ಅತಿಯಾದ ಕೆಲಸದಿಂದ ನಿಮ್ಮ ದೇಹಗಳನ್ನು ದಂಡಿಸುವುದು ಎಂಬುದಾಗಿ ಅರ್ಥವಲ್ಲ. ಆತನ ಜನರು ಅವರ ದೇಹಗಳ ಕಾಳಜಿ ವಹಿಸುವುದರಲ್ಲಿ ಶಿಸ್ತುಳ್ಳ ಪ್ರಜ್ಞೆಯನ್ನು ಪಾಲಿಸಬೇಕೆಂದು ದೇವರು ಅಪೇಕ್ಷಿಸುತ್ತಾನೆ. ಇದರೆಲ್ಲದರ ನಂತರ ಇದು ಒಂದು ದೇವರ ಆಲಯವಾಗಿದೆ. ಹಾಗೆಯೇ ನಿಮ್ಮ ಜೀವಿತದಲ್ಲಿ ದೇವರು ಒಂದು ಕರೆಯನ್ನು ಇಟ್ಟಿದ್ದಾನೆಂಬುದನ್ನು ನೀವು ಅರಿತ ನಿಮಿತ್ತದಿಂದ ಜೀವನದಲ್ಲಿ ಯಾವುದೇ

ಗುರಿಯಿಲ್ಲದೆ 'ಅಲೆದಾಡು ಮತ್ತು ಇನ್ನೂ ನಿಮಗಾಗಿ ದೇವರು ಯೋಚಿಸಿದ ಎಲ್ಲವನ್ನು ಸಾಧಿಸಲು ಅಪೇಕ್ಷಿಸುವುದು ಎಂಬುದು ಇದರ ಅರ್ಥವಲ್ಲ. ಇನ್ನೊಂದು ಕಡೆಯಲ್ಲಿ ನೀವು ಸಿದ್ಧರಾಗಿರಬೇಕು, ತರಬೇತಿ ಮತ್ತು ನಿಮ್ಮನ್ನು ಸಜ್ಜುಗೊಳಿಸಿಕೊಂಡಿರಬೇಕು ಮತ್ತು ನಿಮ್ಮ ಜೀವಿತಕ್ಕಿರುವ ಆತನ ಕರೆಯನ್ನು ನೆರವೇರಿಸಲೂ ಹಂತ-ಹಂತವಾಗಿ ದೇವರೊಡನೆ ಚಲಿಸಬೇಕು.

ಕ್ರಿಸ್ತೀಯ ಸೇವೆಯಲ್ಲಿರುವಂತಹವರು, ಕೇವಲ ಬಲವಾದ ಅಭಿಷೇಕವುಳ್ಳವರಾಗಿರುವುದು ಭೂಮಿಯ ಮೇಲೆ ಸಂಪೂರ್ಣವಾಗಿ ಪರಿಣಾಮಕಾರಿಯಾಗಿರಲೂ ಸಾಕಾಗುವುದಿಲ್ಲ ನಾವು ಹೇಗೆ ಸಂಘಟಿಸಬೇಕು, ಸಮನ್ವಯಗೊಳಿಸಬೇಕು ಮತ್ತು ಭೂಮಿಯ ಮೇಲೆ ದೇವರಿಗಾಗಿ ಸ್ಫೋಟಕ ಶಕ್ತಿಯಾಗಿರಲೂ ನಮ್ಮ ಸೇವಾ ಪ್ರಯತ್ನಗಳನ್ನು ಕ್ರಮವಾಗಿ ಪಾಲಿಸಬೇಕು ಸೈತಾನನ ನೊಗಗಳನ್ನು ನಾಶ ಮಾಡುವಂತದ್ದು ಮತ್ತು ಜನರ ಜೀವಿತದಲ್ಲಿರುವ ಭಾಗಗಳನ್ನು ಇಳಿಸುವಂತದ್ದು ಅಭಿಷೇಕವಾಗಿದೆ ಎಂಬುದು ಸತ್ಯವಾದುದಾಗಿದೆ. ಆದರೆ ಕೆಟ್ಟ ನಿರ್ವಹಣೆ ಮತ್ತು ಕ್ರಮವಾದ ಸಂಘಟನೆಯ ಕೊರತೆಯು, ಅವರಿಗೆ ಕೊಡಲ್ಪಟ್ಟಂತಹ ಅಭಿಷೇಕದ ಪ್ರಭಾವವನ್ನು ಹೆಚ್ಚಿಸುವುದಕ್ಕೆ ಅಡ್ಡಿಯನ್ನುಂಟು ಮಾಡುತ್ತೆಂಬುದು ಅಷ್ಟೇ ಸತ್ಯಕರವಾಗಿದೆ.

ಕೆಲವೊಮ್ಮೆ, ನಾವು ದೇವರಿಗಿಂತ ಹೆಚ್ಚಾಗಿ ಆತ್ಮಿಕರಾದವರಂತೆ ನಟಿಸುತ್ತೇವೆ! ನಾವು ಕೆಲವೊಮ್ಮೆ ಎಷ್ಟು ಆತ್ಮಿಕವಾದವರಾಗುತ್ತೇವೆಂದರೆ. ನಮಗೆ ಯಾವುದೇ ಲೌಕಿಕ ಉಪಯೋಗವಿಲ್ಲ ಎಂಬಂತೆ ನಾವಾಗುತ್ತೇವೆ. ಅಂತಹ ಪರಿಸ್ಥಿತಿಗಳಲ್ಲಿ ಆತನ ರಾಜ್ಯಕ್ಕಾಗಿ ಯಾವುದಾದರೂ ಉಪಯುಕ್ತವಾದದ್ದನ್ನು ಮಾಡಲೂ ನಮ್ಮನ್ನು ಪಡೆಯುವುದರಲ್ಲಿ ದೇವರು ಸಹ ಇದು ಕಷ್ಟಕರ ಎಂಬುದಾಗಿ ಅಂದುಕೊಳ್ಳಬಹುದು ಎಂಬುದಾಗಿ ನಾನು ಅಂದುಕೊಳ್ಳುತ್ತೇನೆ. ನಮ್ಮ ಜೀವಿತಕ್ಕಿರುವ ದೇವರ ಯೋಜನೆಯನ್ನು ನಮ್ಮ ಕ್ರಿಯೆಗಳು, ಹಾನಿ ಮಾಡಿವೆಯಾ ಬದಲಾವಣೆ ಮಾಡಿವೆಯ, ಪ್ರಭಾವಿಸಿವೆಯಾ ಎಂಬ ವಿಷಯದ ಬಗ್ಗೆ ಆಲೋಚಿಸಲೂ ಅನೇಕ ದಿನಗಳನ್ನು ಅದರಲ್ಲಿ ಕಳೆದಂತಹ ಸಮಯಗಳು ಇವೆ. ಇದು ಒಂದು ತುಂಬಾ ದುಃಖಕರವಾದ ಸಮಯವಾಗಿತ್ತು. ದೇವರು ಸರ್ವಶಕ್ತನು ಮತ್ತು ಆತನ ಯೋಜನೆಗಳು ಸೋಲಿಸಲ್ಪಡುವುದಿಲ್ಲ ಎಂಬುದು ಒಂದು ಕಡೆಯಲ್ಲಿ ನನಗೆ ಗೊತ್ತಿತ್ತು. ''ನೀನು ಸಕಲ ಕಾರ್ಯಗಳನ್ನು ನಡೆಸಬಲ್ಲೆಯೆಂತಲೂ ಯಾವ ಸಂಕಲ್ಪವೂ ನಿನಗೆ ಅಸಾಧ್ಯವಲ್ಲವೆಂತಲೂ ತಿಳಿದುಕೊಂಡೇ ಇದ್ದೇನೆ.'' (ಯೋಬನು 42:2)

ಆದರೂ ಇನ್ನೊಂದು ಕಡೆಯಲ್ಲಿ, ಸತ್ಯವೇದದುದ್ದಕ್ಕೂ ಆತನ ಉದ್ದೇಶಗಳನ್ನು ನೆರವೇರಿಸಲೂ ಮಾನವನ ವಿಧೇಯತೆ ಮತ್ತು ಸಹಕಾರವನ್ನು ದೇವರು ಅಪೇಕ್ಷಿಸುತ್ತಾನೆಂಬುದನ್ನು ನಾವು ನೋಡುತ್ತೇವೆ. ಸಾಮಾನ್ಯವಾದ 'ಸಾರ್ವತ್ರಿಕ ಮಟ್ಟದಲ್ಲಿ, ಮಾನವ ಜನಾಂಗಕ್ಕಾಗಿ ಆತನು ಹೊಂದಿರುವ ಎಲ್ಲಾ ಉದ್ದೇಶಗಳನ್ನು ನೆರವೇರಿಸಲೂ ದೇವರು ಆತನ ಸಾರ್ವಭೌಮತ್ವದಲ್ಲಿ ಚಿತ್ತವುಳ್ಳವನಾಗಿರುತ್ತಾನೆ. ಆದರೆ ವೈಯಕ್ತಿಕವಾದ ಮಟ್ಟದಲ್ಲಿ ನಮ್ಮ ಜೀವಿತಕ್ಕಿರುವ ದೇವರ ಉದ್ದೇಶಗಳ ನೆರವೇರಿಕೆ ಮತ್ತು ತೆಗೆದುಕೊಳ್ಳುವಿಕೆಗೆ ನಮ್ಮ ಕ್ರಿಯೆಗಳು ಪ್ರಭಾವ ಬೀರುತ್ತವೆ. ಅನೇಕ ಕ್ರೈಸ್ತರು ಅವರ ಸ್ವಂತವಾಗಿ ಕಾರ್ಯ ಮಾಡುವುದರ ನಿಮಿತ್ತವಾಗಿ ಅವರ ಜೀವಿತಗಳಲ್ಲಿರುವ ದೇವರ ಅತ್ಯುನ್ನತ್ತ ಮತ್ತು ಉತ್ತಮವಾದವುಗಳನ್ನು ನೆರವೇರಿಸುವುದರಲ್ಲಿ ಬಿದ್ದು ಹೋಗಿರುವುದು ದುಃಖಕರವಾದ ಸಂಗತಿಯಾಗಿದೆ.

**ನಿಮ್ಮ ಜೀವಿತದ ಮೇಲೆ ಆತನ ಕರೆಯನ್ನು ನೆರವೇರಿಸಲೂ ಹಂತ ಹಂತವಾಗಿ ದೇವರೊಂದಿಗೆ ಚಲಿಸಬೇಕು ಮತ್ತು ನಿಮ್ಮನ್ನು ಸಿದ್ಧಗೊಳಿಸಕೊಂಡಿರುವುದು, ತರಬೇತಿ ಮತ್ತು ಸಜ್ಜುಗೊಂಡಿರುವುದ ಅವಶ್ಯವಾಗಿದೆ.**

## 6

# ಜ್ಞಾನ-ನಮ್ಮ ಸುರಕ್ಷತೆ

ಪ್ರಸಂಗಿ 9:16,18; 10:10

**''ಬಲಕ್ಕಿಂತ ಜ್ಞಾನವೇ ಶ್ರೇಷ್ಟ...ಯುದ್ಧಾಯುಧಗಳಿಗಿಂತ ಜ್ಞಾನವೇ ಉತ್ತಮ...... ಕಾರ್ಯಸಿದ್ಧಿಗೆ ಜ್ಞಾನವೇ ಸಾಧನ.''**

ಜ್ಞಾನೋಕ್ತಿಗಳು 4:7,8

**''ಜ್ಞಾನವನ್ನು ಪಡೆಯಬೇಕೆಂಬುದೇ ಜ್ಞಾನಬೋಧೆಯ ಪ್ರಥಮ ಪಾಠ ನಿನ್ನ ಎಲ್ಲಾ ಸಂಪತ್ತಿನಿಂದಲೂ ವಿವೇಕವನ್ನು ಪಡೆ ಜ್ಞಾನವೆಂಬಾಕೆಯು ಶ್ರೇಷ್ಟಳು ಎಂದು ನೀನು ಭಾವಿಸಿದರೆ ಆಕೆಯು ನಿನ್ನನ್ನು ಉನ್ನತಿಗೆ ತರುವಳು ಆಕೆಯನ್ನು ಅಪ್ಪಿಕೊಂಡರೆ ನಿನ್ನನ್ನು ಘನ ಪಡಿಸುವಳು.**

ನಾನು ಇದರ ಮೇಲೆ ನಿರಂತರವಾಗಿ ಆಲೋಚಿಸುವಾಗ ನನ್ನ ಸ್ವಂತ ಜೀವನದಲ್ಲಿ ನಾನು ಮಾಡಿದಂತಹ ತಪ್ಪುಗಳ ಅನೇಕ ಉದಾಹರಣೆಗಳನ್ನು ನಾನು ನೆನಪಿಸಿಕೊಂಡೆನು. ನಾನು ಕಷ್ಟಪಟ್ಟು ಕೆಲಸ ಮಾಡಿದ್ದರೆ ಏನು? ನಾನು ಇದನ್ನು ಇನ್ನೊಂದರ ಬದಲಾಗಿ ಆಯ್ಕೆ ಮಾಡಿಕೊಂಡಿದ್ದರೆ ಏನು? ನನ್ನ ಸಮಯ ಮತ್ತು ಶಕ್ತಿಯನ್ನು ಒಂದು ನಿರ್ದಿಷ್ಟ ಕ್ಷೇತ್ರದಲ್ಲಿ ಇನ್ನೊಂದರಕ್ಕೆ ಬದಲಾಗಿ ಹೂಡಿಕೆ ಮಾಡಿದ್ದರೆ ಏನು? ನಾನು ಅಗತ್ಯವಾದ ಮಾಹಿತಿ ಮತ್ತು ಜ್ಞಾನವನ್ನು ಪಡೆದಿದ್ದರೆ ನಾನು ಇನ್ನೂ ಉತ್ತಮವಾಗಿ ಗೊತ್ತಿದ್ದರೆ - ವಿಷಯಗಳು ವಿಭಿನ್ನವಾಗಿರುತ್ತಿದ್ದವೇನೋ? ನನ್ನ ಸ್ವಂತ ಕಾರ್ಯಗಳ ನಿಮಿತ್ತದಿಂದ ನಾನು ಸಹಿಸಿಕೊಂಡಂತಹ ತೊಂದರೆಗಳು ಮತ್ತು ಕೆಲವು ಕಷ್ಟ ಪರಿಸ್ಥಿತಿಗಳನ್ನು ನಾನು ತಪ್ಪಿಸಬೇಕಾಗಿತ್ತು. ನಾನು ಇವೆಲ್ಲಾ ಸಂಗತಿಗಳನ್ನು ಪರಿಗಣಿಸುವಾಗ, ನಾನು ಮಾಡಬೇಕಾದುದೆಂದರೆ ಪರಲೋಕದ ತಂದೆಗೆ ಮೊರೆಯಿಡುವುದು ನನ್ನ ಜೀವಿತಕ್ಕಾಗಿ ಉತ್ತಮವಾದದನ್ನು ಮತ್ತು ಆತನ ಅತ್ಯುನ್ನತೆಯುಳ್ಳವುಗಳನ್ನು ನಾನು ಕಳೆದುಕೊಳ್ಳಬಾರದೆಂದು ಪ್ರಾರ್ಥಿಸಬೇಕು. ಜ್ಞಾನವುಳ್ಳ ನಿರ್ಧಾರಗಳನ್ನು ಮಾಡುವುದರಲ್ಲಿನ ಪ್ರಾಮುಖ್ಯತೆಯನ್ನು ಅಧಿಕವಾಗಿ ಗಂಭೀರವಾಗಿ ಪರಿಗಣಿಸುವುದಕ್ಕೆ ನಾನೂ ಸಹ ಸೆಳೆಯಲ್ಪಟ್ಟಿದ್ದೇನೆ. ಜ್ಞಾನವು ನಮ್ಮ ಸುರಕ್ಷತೆಯಾಗಿದೆ. ನಾವು ಜ್ಞಾನದಲ್ಲಿ

ನಡೆಯುವಾಗ ನಾವು ಸಂರಕ್ಷಿತವಾಗಿ ನಡೆಯುತ್ತೇವೆ. ''ಕಾಲವೂ ನ್ಯಾಯತೀರ್ಪು ಉಂಟೆಂಬದು ಜ್ಞಾನಿಯ ಬುದ್ಧಿಗೆ ಗೊತ್ತು ಪ್ರತಿಯೊಂದು ಕಾರ್ಯಕ್ಕೆ ಕಾಲವೂ ನ್ಯಾಯ ತೀರ್ಪೂ ಇರುವವಲ್ಲವೆ.'' (ಪ್ರಸಂಗಿ 8:5,6) ಎಂಬುದಾಗಿ ವಚನಭಾಗವು ನಮಗೆ ಹೇಳುತ್ತದೆ. ಪ್ರತಿಯೊಂದು ವಿಚಾರಗಳಿಗಾಗಿ ಒಂದು ಸರಿಯಾದ ತೀರ್ಮಾನ ಮತ್ತು ಒಂದು ಸರಿಯಾದ ಸಮಯವಿದೆ. ''ಜ್ಞಾನಕ್ಕೆ'' ಮತ್ತು ಮಾಡಬೇಕೆಂಬುದು ಗೊತ್ತು, ಹೇಗೆ ಮಾಡಬೇಕೆಂಬುದು ಮತ್ತು ಕೊಡಲ್ಪಟ್ಟಂತಹ ಪರಿಸ್ಥಿತಿಗಾಗಿ ಸರಿಯಾದ ವಿಷಯಗಳನ್ನು ಯಾವಾಗ ಮಾಡಬೇಕೆಂಬುದಾಗಿ ತಿಳಿದಿದೆ.

''ನೀನು ನಡೆಯುವ ದಾರಿಯನ್ನು ಸಮ ಮಾಡು ನಿನ್ನ ಮಾರ್ಗಗಳೆಲ್ಲಾ ದೃಢವಾಗಿರಲಿ''(ಜ್ಞಾನೋಕ್ತಿಗಳು 4:26) ಎಂಬುದಾಗಿ ದೇವರ ವಾಕ್ಯ ಹೇಳುತ್ತದೆ. ಇನ್ನೊಂದು ಪದದಲ್ಲಿ ಹೇಳುವುದಾದರೆ ನೀವು ಮಾಡುವಂತಹ ನಿರ್ಧಾರಗಳ ಕುರಿತು ಎರಡೂ ಅಥವಾ ಮೂರು ಸಾರಿ ಆಲೋಚಿಸರಿ ನಿಲ್ಲಿರಿ, ಮತ್ತು ವಿಚಾರ ಮಾಡಿರಿ. ಹೆಚ್ಚಿನದಾಗಿ ಜ್ಞಾನವುಳ್ಳ ನಿರ್ಧಾರಗಳನ್ನು ಮಾಡುವುದರಲ್ಲಿ ನಮ್ಮ ಜ್ಞಾನ ಮತ್ತು ನಮ್ಮ ಕೈಯಲ್ಲಿರುವ ವಿಷಯದ ಬಗ್ಗೆ ತಿಳುವಳಿಕೆಯನ್ನು ಹೆಚ್ಚಿಸಲೂ ಮಾಹಿತಿಯನ್ನು ಪಡೆದುಕೊಳ್ಳಬೇಕಾಗುತ್ತದೆ. ಒಂದು ನಿರ್ದಿಷ್ಟ ಕ್ಷೇತ್ರದಲ್ಲಿ ಅಧಿಕವಾಗಿ ಕಲಿತ ಮತ್ತು ಅನುಭವಿಗಳೊಂದಿಗೆ ಮಾತಾನಾಡಲೂ ಮತ್ತು ಕಲಿಯಲು ಇದು ನಮಗೆ ತುಂಬಾ ಪ್ರಯೋಜನವನ್ನು ನೀಡುತ್ತದೆ. ಅದಕ್ಕೆ ದೇವರ ವಾಕ್ಯವು ಹೀಗೆ ಹೇಳುತ್ತದೆ ''ಜ್ಞಾನಿಗೆ ತ್ರಾಣ ಬಲ್ಲವನಿಗೆ ಬಹು ಬಲ ಮಂತ್ರಾಲೋಚನೆಯಿಂದ ಯುದ್ಧವನ್ನು ನಡೆಸು ಬಹುಮಂತ್ರಿಗಳು ಇರುವಲ್ಲಿ ಸಂರಕ್ಷಣೆಯಿರುವುದು (ಜ್ಞಾನೋಕ್ತಿಗಳು 24:5,6) ನಮಗೆ ಸಲಹೆಗಳು ಮತ್ತು ಹಿತಮಾತುಗಳು ಅವಶ್ಯಕವಿಲ್ಲವೆಂದು ಹೇಳುವುದರಲ್ಲಿ ನಮ್ಮನ್ನು ನಾವೇ ತುಂಬಾ ಆತ್ಮಿಕರೆಂದು ಭಾವಿಸಬಾರದು.

ಸೇವೆಯಲ್ಲಿ, ವರಗಳು ಮತ್ತು ಅಭಿಷೇಕ ತುಂಬಾ ಪ್ರಾಮುಖ್ಯ ಆದಾಗ್ಯೂ ಅವುಗಳನ್ನು ಗರಿಷ್ಟವಾಗಿ ಉಪಯೋಗಕ್ಕೆ ತರಲು, ಮತ್ತು ಶಾಶ್ವತವಾದ ಪ್ರಭಾವವನ್ನು ಬೀರಲೂ ನಮ್ಮ ವರಗಳು ಮತ್ತು ಅಭಿಷೇಕ, ಉತ್ತಮ ನಾಯಕತ್ವ ಕುಶಲತೆಗಳು, ಉತ್ತಮ ಸಂಘಸಂಸ್ಥೆ, ಪರಿಶ್ರಮದ ಕೆಲಸ, ಶಿಸ್ತು, ನಿರಂತರ ಸುಧಾರಣೆ ಮತ್ತು ಅತೀ ಹೆಚ್ಚಾದ ದೈವಿಕ ಜ್ಞಾನವನ್ನು ಸೇರಿಸುವುದು ಅತ್ಯಗತ್ಯವಾಗಿದೆ.

# 8

# ದೇವರ ಒಳ್ಳೆಯತನ

ಜ್ಞಾನೋಕ್ತಿಗಳು 3:5, 6

**ಸ್ವಬುದ್ಧಿಯನ್ನೇ ಆಧಾರ ಮಾಡಿಕೊಳ್ಳದೆ ಪೂರ್ಣ ಮನಸ್ಸಿನಿಂದ ಯೆಹೋವನನ್ನಿ ಭರವಸೆಯಿಡು. ನಿನ್ನ ಎಲ್ಲಾ ನಡವಳಿಕೆಯಲ್ಲಿ ಆತನ ಚಿತ್ತಕ್ಕೆ ವಿಧೇಯನಾಗಿರು ಆತನೇ ನಿನ್ನ ಮಾರ್ಗಗಳನ್ನು ಸರಾಗ ಮಾಡುವನು.**

ಅದೇನೇ ಇದ್ದರೂ, ನಮ್ಮ ಸಾರ್ವಭೌಮ ದೇವರು ಒಳ್ಳೆಯವನನ್ನು ಮತ್ತು ಕರುಣೆಯುಳ್ಳ ದೇವರು. ಆತನು ಒಂದು ಸಣ್ಣ ಗುಬ್ಬಚ್ಚಿಯನ್ನು ಮರೆಯುವುದಿಲ್ಲ ನಮ್ಮ ತಲೆಯ ಪ್ರತಿಯೊಂದು ಕೂದಲುಗಳು ಲೆಕ್ಕಿಸಲ್ಪಟ್ಟಿವೆ. (ಲೂಕ 12:6,7). ಸಾರ್ವಭೌಮತ್ವದಲ್ಲಿ, ಕರ್ತನು ಅದ್ಭುತಕರವಾಗಿ ನಮ್ಮ ಪ್ರತಿದಿನದ ಜೀವನದ ವಿವರಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಾನೆ ನಮ್ಮ ದಾರಿಗಳನ್ನು ಮಾರ್ಗದರ್ಶಿಸಲೂ ಆತನು ಮಾಡಿದ ವಾಗ್ದಾನಗಳನ್ನು ಸ್ಮರಿಸಬೇಕು ಮತ್ತು ನಾವು ನಿರೀಕ್ಷೆಯಿಡ ಬೇಕೆಂಬುದನ್ನು ಆತನು ನಮ್ಮಿಂದ ಅಪೇಕ್ಷಿಸುವಂತದ್ದಾಗಿದೆ. ಹೌದು ಜೀವನದ ಅನೇಕ ಸಮಸ್ಯೆಗಳಲ್ಲಿ ಜ್ಞಾನವನ್ನು ಮತ್ತು ತಿಳುವಳಿಕೆಯನ್ನು ಹುಡುಕುವುದು ನಮ್ಮ ಮೇಲಿರುವ ಜವಾಬ್ದಾರಿಯಾಗಿದೆ. ನಾವು ಇದನ್ನು ಮಾಡುವಾಗ, ನಮ್ಮ ಹೆಜ್ಜೆಗಳು ಕರ್ತನಿಂದ ಆಜ್ಞಾಪಿಸಲ್ಪಟ್ಟಿರುತ್ತವೆ. ''ಸತ್ಪುರುಷನ ಗತಿಸ್ಥಾಪನೆಯು ಆತನು ಅವನ ಪ್ರವರ್ತನೆಯನ್ನು ಮೆಚ್ಚುತ್ತಾನೆ.'' (ಕೀರ್ತನೆಗಳು 37:23) ಆತನು ನಮಗಾಗಿ ಆದೇಶಿಸಲ್ಪಟ್ಟಿರುವಂತಹ ಅವಧಿಯಲ್ಲಿ ನಮ್ಮನ್ನು ತಿರುಗಿಸಲು ನಮ್ಮ ಜೀವಿತದಲ್ಲಿ ಘಟನೆಗಳನ್ನು ಆದೇಶಿಸುತ್ತಾನೆ. ನಾವು ಇನ್ನೂ ತಪ್ಪು ಮಾಡುತ್ತಿದ್ದರೆ, ಬಿದ್ದು ಹೋಗಿದ್ದರೆ ಮತ್ತು ಮುಗ್ಗರಿಸಿದ್ದರೆ ನಾವು ಸಂಪೂರ್ಣವಾಗಿ ಹಾಳಾಗುವುದಿಲ್ಲ ಯಾಕೆಂದರೆ ಕರ್ತನು ನಮ್ಮನ್ನು ಎತ್ತಿ ಹಿಡಿಯುತ್ತಾನೆ. ಅದು ನಮ್ಮ ಜೀವಿತಕ್ಕಿರುವ ದೇವರ ಕನಸ್ಸುಗಳ ಕೊನೆಯಲ್ಲ ''ಅವನು ಕೆಳಗೆ ಬಿದ್ದರೂ ಏಳದ್ದೆ ಹೋಗುವುದಿಲ್ಲ. ಯೆಹೋವನು ಅವನನ್ನು ಕೈಹಿಡಿದು ಉದ್ಧಾರ ಮಾಡುವನು'' (ಕೀರ್ತನೆಗಳು 37:24) ನಮ್ಮ ಕಾಲುಗಳ ಮೇಲೆ ನಿಂತುಕೊಳ್ಳುವಂತೆ ಆತನು ಮಾಡುತ್ತಾನೆ ಮತ್ತು ನಮ್ಮ ಪ್ರಯಾಣದ ಮೇಲೆ ಪುನಃ ನಮ್ಮನ್ನಿರಿಸುತ್ತಾನೆ ಅದಕ್ಕಾಗಿ ದೇವರಿಗೆ ಸ್ತೋತ್ರ!

ಕೀರ್ತನೆಗಳು 40:1–3

**ನಾನು ಯೆಹೋವನಿಗೋಸ್ಕರ ನಿರೀಕ್ಷಿಸಿಯೇ ನಿರೀಕ್ಷಿಸಿದೆನು. ಆತನು ನನ್ನ ಮೊರೆಗೆ ಕಿವಿಗೊಟ್ಟು ಲಕ್ಷಿಸಿದನು. ನನ್ನನ್ನು ನಾಶನದ ಗುಂಡಿಯೊಳಗಿಂದ ಎತ್ತಿದನು. ಕೆಸರಿನೊಳಗಿಂದ ನನ್ನನ್ನು ತೆಗೆದು ಬಂಡೆಯ ಮೇಲೆ ನಿಲ್ಲಿಸಿ ನಾನು ದೃಢವಾಗಿ ಹೆಜ್ಜೆಯಿಡುವಂತೆ ಮಾಡಿದನು. ಆತನು ನನ್ನ ಬಾಯಲ್ಲಿ ನೂತನ ಕೀರ್ತನೆಯನ್ನು ಹುಟ್ಟಿಸಿದ್ದಾನೆ ಅದು ನಮ್ಮ ದೇವರ ಸ್ತೋತ್ರವೇ ಆತನ ಮಹತ್ಕಾರ್ಯಗಳನ್ನು ನೋಡಿದ ಅನೇಕರು ಭಯಭಕ್ತಿಯುಳ್ಳವರಾಗಿ ಯೆಹೋವನಲ್ಲಿ ನಂಬಿಕೆಯಿಡುವರು.**

ಕೀರ್ತನೆಗಾರನಾದ ದಾವೀದನು, ''ನಾಶನದ ಗುಂಡಿಯೊಳಗೆ'' ಸ್ವತಃ ಬಿದ್ದಿರುವ ಅವನ ಕಾಲುಗಳು ''ಜೇಡಿಮಣ್ಣು ಅಥವಾ ಕೆಸರಿನಲ್ಲಿ'' ಸಿಲುಕಿಕೊಂಡಿರುವುದನ್ನು ಕಂಡನು. ಅಂತಹ ಪರಿಸ್ಥಿತಿಯಲ್ಲಿ ಅವನು ಇರಲೂ ಅನೇಕ ಕಾರಣಗಳು ಇದ್ದವು. ಆದರೆ ಅವನು ದೇವರಿಗಾಗಿ ತಾಳ್ಮೆಯಿಂದ ಕಾದುಕೊಂಡಿದ್ದನು, ಕರ್ತನು ಅವನ ಮೊರೆಯನ್ನು ಲಾಲಿಸಿ ಕೆಸರಿನಿಂದ ಹೊರತಂದು ದೃಢವಾಗಿ ಹೆಜ್ಜೆಯಿಡುವಂತೆ ಮಾಡಿದನು. (ಕೀರ್ತನೆಗಳು 410:1–3) ಹಲ್ಲೆಲೂಯ! ಇದು ದೇವರ ಒಳ್ಳೆಯತನ ನಾವುಗಳು ತಪ್ಪು ಮಾಡಿದವರಾಗಿ ಅಂತಹ ಭಯಾನಕ ಕೆಸರಿನ ಗುಂಡಿಯಲ್ಲಿ ಬಿದ್ದರು ಕರ್ತನು ನಮ್ಮನ್ನು ಎದ್ದು ನಿಲ್ಲಿಸಲು ಮತ್ತು ದೃಢವಾದ ನೆಲದ ಮೇಲೆ ನಿಲ್ಲಿಸಲು ಶಕ್ತನಾಗಿದ್ದಾನೆ. ನಮ್ಮ ತಪ್ಪುಗಳು ನೋವುಗಳಿಗೆ ಕಾರಣವಾಗಬಹುದು. ನಮ್ಮ ಕೆಟ್ಟ–ಮಾಹಿತಿಗಳು ನಿರ್ಧಾರಗಳು ವಿಳಂಬಗಳಿಗೆ ಕಾರಣವಾಗಬಹುದು. ನಮ್ಮ ಸೋಲುಗಳು ಸುತ್ತು ಮಾರ್ಗಗಳಿಗೆ ಕಾರಣವಾಗಬಹುದು, ಆದರೆ ನಾವುಗಳು ಕರ್ತನಿಗೆ ಹೊಂದಿಕೊಂಡಿರುವರೆಗೂ, ನಮ್ಮ ಜೀವಿತದಲ್ಲಿ ಆತನ ಯೋಜನೆಗಳನ್ನು ಇನ್ನೂ ಹೊತ್ತು ಹೋಗಲೂ ನಮ್ಮನ್ನು ಶಕ್ತರನ್ನಾಗಿ ಮಾಡುತ್ತಾನೆ. ನಮ್ಮ ಸೋಲುಗಳಿಗಿಂತ ದೇವರು ದೊಡ್ಡವನಾಗಿದ್ದಾನೆ. ನಮ್ಮ ತಪ್ಪುಗಳಿಗಿಂತ ಆತನು ದೊಡ್ಡವನಾಗಿದ್ದಾನೆ. ನಮ್ಮ ತಪ್ಪುಗಳಿಂದ ನಾವು ಪಾಠ ಕಲಿತು, ಜ್ಞಾನ ಹೊಂದಿಕೊಂಡು ನಮ್ಮ ಓಟದಲ್ಲಿ ಮುಂದುವರೆದರೆ ದೇವರು ನಮ್ಮನ್ನು ತಲುಪಬೇಕಾದ ಕೊನೆಯ ನಿರ್ದಿಷ್ಟ ಸ್ಥಳಕ್ಕೆ ತೆಗೆದುಕೊಂಡು ಹೋಗುತ್ತಾರೆ. ದೇವರು ನಮ್ಮ ಗೋಳಾಟವನ್ನು ನೃತ್ಯವಾಗಿ ಬದಲಾಯಿಸಲು ಶಕ್ತನಾಗಿದ್ದಾನೆ. ''ಆಗ ನೀನು ನನ್ನ ಗೋಳಾಟವನ್ನು ತಪ್ಪಿಸಿ ಸಂತೋಷದಿಂದ ಕುಣಿದಾಡುವಂತೆ ಮಾಡಿದೆ. ನಾನು ಕಟ್ಟಿಕೊಂಡಿದ್ದ ಗೋಣಿ ತಟ್ಟನ್ನು ತೆಗೆದು ಬಿಟ್ಟು ಹರ್ಷವಸ್ತ್ರವನ್ನು ನನಗೆ ಧಾರಣೆ ಮಾಡಿಸಿದಿ'' (ಕೀರ್ತನೆಗಳು 30:11). ದೇವರು ಕೆಟ್ಟದ್ದರಿಂದ ಸುಂದರತ್ವದ ಕಡೆಗೆ ತಿರುಗಿಸಲು ಶಕ್ತನಾಗಿದ್ದಾನೆ. ಆತನು ನಮ್ಮ ಹತಾಶೆಗಳನ್ನು ದೈವಿಕ ನಿರ್ದಿಷ್ಟ ಸ್ಥಾನಗಳಾಗಿ ತಿರುಗಿಸುತ್ತಾನೆ.

ಸಮಯಕ್ಕಿಂತಲೂ ದೇವರು ದೊಡ್ಡವನು. ''ಗುಂಪು ಮಿಡತೆ, ಸಣ್ಣ ಮಿಡತೆ, ದೊಡ್ಡ ಮಿಡತೆ, ಚೂರಿ ಮಿಡತೆ ಅಂತು ನಾನು ನಿಮ್ಮ ಮೇಲೆ ಕಳುಹಿಸಿದ್ದ ನನ್ನ ದೊಡ್ಡ ದಂಡು ತಿಂದು ಬಿಟ್ಟ ವರುಷಗಳನ್ನು ನಾನು ನಿಮಗೆ ಕಟ್ಟಿ ಕೊಡುವೆನು'' (ಯೋವೇಲ 2:25) ನಮ್ಮ ತಪ್ಪು ಆಯ್ಕೆಗಳ ನಿಮಿತ್ತದಿಂದ ಕಳೆದು ಹೋದ ಸಮಯವನ್ನು ಹೇಗೆ ಕಟ್ಟಿಕೊಡಬೇಕೆಂಬುದು ಆತನಿಗೆ ತಿಳಿದಿದೆ.

**ನಮ್ಮ ಕೆಟ್ಟ-ಮಾಹಿತಿಯುಳ್ಳ ತೀರ್ಮಾನಗಳು ವಿಳಂಬಗಳಿಗೆ ಕಾರಣವಾಗಿವೆ. ನಮ್ಮ ಸೋಲುಗಳು ಸುತ್ತು ಮಾರ್ಗಗಳಿಗೆ ಕಾರಣವಾಗಬಹುದು, ಆದರೆ ನಾವು ದೇವರನ್ನು ಹಿಡಿದುಕೊಂಡಿರುವವರೆಗೂ, ನಮ್ಮ ಜೀವಿತದಲ್ಲಿರುವ ಆತ ಯೋಜನೆಗಳನ್ನು ಹೊತ್ತು ಹೋಗಲೂ ನಮ್ಮನ್ನು ಶಕ್ತರನ್ನಾಗಿ ಮಾಡುತ್ತಾನೆ.**

# ನೀವು ಹೊಂದಿಕೊಳ್ಳಲು ಮಾದರಿಗಳು

ಆಲ್ ಪೀಪಲ್ಸ್ ಸಭೆಯು ಉಚಿತವಾಗಿ ವಿದ್ಯುನ್ಮಾನ ಪ್ರತಿಗಳನ್ನು (ಮೈಕ್ರೋಸಾಫ್ಟ ಪದ ದಾಖಲೆಗಳನ್ನು) ಯಾವುದಾದರೂ ಅಥವಾ ನಾವು ಉಪಯೋಗಿಸುವಂತಹ ಕೆಳಕಂಡ ದಾಖಲೆಗಳನ್ನು ಒದಗಿಸಲು ಸಂತೋಷವುಳ್ಳವರಾಗಿದ್ದೇವೆ.

ಸಭಾ ಸಿಬ್ಬಂದಿ ಮಾರ್ಗದರ್ಶಿ

ಸಭಾ ಸಿಬ್ಬಂದಿ ಕಾರ್ಯ ನಿರ್ವಹಣೆ ವಿಮರ್ಶೆ ದಾಖಲೆ

ಸಭಾ ಸ್ವಯಂ ಸೇವಕ ಮಾರ್ಗದರ್ಶಿ

ಲೈಫ್‌ಗ್ರೂಪ್ ನಾಯಕರುಗಳು ತರಬೇತಿ ಕೈಪಿಡಿ

ಸಭಾ ಸದಸತ್ವ ಕಿರುಪುಸ್ತಕ

ಮಾರ್ಗದರ್ಶನದ ಮಾರ್ಗದರ್ಶಿ

ಪಾತ್ರ ವಿವರಣೆಯ ಮಾದರಿ

contact@apcwo.orgಗೆ ನೀವು ಇ-ಮೇಲ್ ಕಳುಹಿಸುವ ಮೂಲಕವಾಗಿ ವಿನಂತಿಸಿ-ಕೊಳ್ಳಬಹುದಾಗಿದೆ.

ನಿಮ್ಮ ಸೇವೆಗೆ ಮತ್ತು ಸಭೆಗೆ ಸರಿ ಹೊಂದುತ್ತಿರುವಂತೆ ಉಪಯೋಗಿಸಿ ಮತ್ತು ಮಾರ್ಪಡಿಸಿಕೊಳ್ಳಲು ನೀವು ಸ್ವತಂತ್ರವಾಗಿ ಮಾಡಿರಿ ಉಪಯೋಗಿಸಿರಿ.

## ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವುದು. (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಭೇತಿಗೊಳಿಸುವುದು (ಇ) ಕ್ರಿಸ್ತನ ಅಂಗವನ್ನು ಕಟ್ಟುವುದನ್ನು, ಬಹಳ ಮುಖ್ಯ ಗುರಿಯಾಗಿರಿಸಿಕೊಂಡಿರುವ, ಭಾರತದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಭೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾಸೇವಕರ ಸಮಾವೇಶವನ್ನು ವರ್ಷಪೂರ್ತಿ ನಡೆಸುವುದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಗಳನ್ನು ಉಚಿತವಾಗಿ ಹಂಚುವುದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚುಟಗೆವುಳ್ಳದ್ದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ನಮ್ಮ ಕಛೇರಿಯ ವಿಳಾಸವಾದ "ಆಲ್ ಪೀಪಲ್ಸ್ ಸಭೆ ಬೆಂಗಳೂರು" ಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಹಿಸಬಹುದು

Account Name: All Peoples Church
Account Number: 0057213809,
IFSC Code: CITI0000004
Bank: Citibank N.A., 506-507,
Level 5, Prestige Meridian 2, # 30,
M.G. Road, Bangalore - 560 001

*ದಯವಿಟ್ಟು ಗಮನಿಸಿ: ಆಲ್ ಪೀಪಲ್ಸ್ ಸಭೆಯು FCRA ಅನುಮತಿ ಹೊಂದಿಲ್ಲ ಮತ್ತು ಭಾರತೀಯ ನಾಗರೀಕರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು.*

ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ! ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!

## ಉಚಿತ ಪ್ರಕಾಶನಗಳು ಮತ್ತು ಸಂಗ್ರಹಗಳು

ಕೆಲಸದ ಕಡೆಗೆ ಸತ್ಯವೇದದ ನೋಟ

ನಿನ್ನ ಕರೆಯನ್ನು ಕಡೆಗಣಿಸದಿರು

ನಿರೀಕ್ಷೆಯನ್ನು ಕಳೆದುಕೊಳ್ಳಬೇಡ

ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು

ವೈಯುಕ್ತಿಕ ಮತ್ತು ತಲೆಮಾರಿನ ಬಂಧನಗಳನ್ನು

ಮುರಿಯುವುದು

ನಿಮ್ಮ ಸಭಾಪಾಲಕರಿಗೆ ಹೇಗೆ ಸಹಾಯ ಮಾಡುವುದು

ದೇವರ ರಾಜ್ಯ ಕಟ್ಟುವವರು

ಪರಲೋಕವೆಂದು ಕರೆಯಲ್ಪಡುವ ನಿಜ ಸ್ಥಳ

ದೇವರ ಉದ್ದೇಶಗಳಿಗೆ ಜನ್ಮ ಕೊಡುವುದು

ಬೇರುಗಳಿಗೆ ಕೊಡಲಿ ಹಾಕುವುದು

ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು ನೆರವೇರಿಸುವುದು

ಉಜ್ಜೀವನದಲ್ಲಿ ಒಂದು ಸಭೆ

ದೇವರ ಪ್ರಸನ್ನತೆ

ಜ್ಞಾನ, ಪ್ರಕಟನೆ ಮತ್ತು ಬಲದ ಆತ್ಮನು

ದೇವರು ಒಳ್ಳೆಯ ದೇವರಾಗಿದ್ದಾನೆ

ಅಸ್ತಿವಾರಗಳು ಭಾಗ – 1

ತೆರೆದ ಪರಲೋಕಗಳು

ಜೀವನದ ರಾತ್ರಿಯ ಸಮಯಗಳು

ಪ್ರಾಮಾಣಿಕತೆ

ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ

ಪರಿವರ್ತನೆ

ಗೌರವದ ಸಂಕೇತ

ದೇವರ ಮನೆ

ಮದುವೆ ಮತ್ತು ಕುಟುಂಬ

ದೈವಿಕ ದಯೆ

ದೈವಿಕ ಕ್ರಮ – ನಗರ ವ್ಯಾಪ್ತಿ ಸಭೆಗಳಲ್ಲಿ

ಶುದ್ಧೀಕರಿಸುವ ಬೆಂಕಿ

ಬದ್ಧತೆಯ ಬಲ

ಜಗಳರಹಿತವಾದ ಜೀವಿತ ಜೀವಿಸುವುದು

ಕೆಲಸ ಮತ್ತು ಅದರ ಮೂಲ ವಿನ್ಯಾಸ

ನಾವು ವಿಭಿನ್ನರು

ತಂದೆಯ ಪ್ರೀತಿ

ನಮ್ಮ ವಿಮೋಚನೆ

ಆತ್ಮಿಕವಾಗಿ ಮನಸುಳ್ಳವರಾಗಿರುವುದು ಲೌಕಿಕ ಜ್ಞಾನವಂತರಾಗಿರುವುದು

ದೇವರ ಮಾರ್ಗದರ್ಶನ ಪಡೆದುಕೊಳ್ಳುವುದು

ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ

ಪ್ರತಿ ಉದ್ದೇಶಕ್ಕೂ ಒಂದು ಸಮಯವಿದೆ

ಶ್! ಹರಟೆ ಬೇಡ

**ಉಚಿತ ಇ-ಪುಸ್ತಕಗಳು**

ನಮ್ಮ ಚರ್ಚ್ ವೆಬ್ ಸೈಟ್‌ಂದ ನಮ್ಮ ಎಲ್ಲಾ ಪುಸ್ತಕಗಳ ಪಿ ಡಿ ಎಫ್ ಅನುವಾದವನ್ನು ಉಚಿತವಾಗಿ ಸಂಗ್ರಹಿಸಲು ದೊರೆಯುತ್ತವೆ. ಇತರೆ ಪ್ರಾದೇಶಿಕ ಭಾಷೆಗಳಲ್ಲೂ ಸಹ ಈ ಪುಸ್ತಕಗಳು ದೊರೆಯುತ್ತದೆ. ಇಂತಹ ಉಚಿತ ಪುಸ್ತಕಗಳಿಗಾಗಿ ಇ–ಮೇಲ್ ಅಥವಾ ಅಂಚೆಯ ಮೂಲಕವಾಗಿ ನಮ್ಮನ್ನು ಸಂಪರ್ಕಿಸಹುದಾಗಿದೆ.

**ಉಚಿತ ಆಡಿಯೋ ಮತ್ತು ವೀಡಿಯೊ ಸಂದೇಶಗಳು**

ಉಚಿತ ಆಡಿಯೋ, ವೀಡಿಯೋ ಸಂದೇಶಗಳು, ಪ್ರಸಂಗದ ಟಿಪ್ಪಣಿಗಳಿಗಾಗಿ ನಮ್ಮ ವೆಬ್‌ಸೈಟನ್ನು ಸಂಪರ್ಕಿಸಿ (apcwo.org/sermons) ಮತ್ತು ಇತರೆ ಅನೇಕ ಅಧ್ಯಯನ ಸಂಗ್ರಹ ಬಳಸಹುದು.

# ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರದಲ್ಲಿ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂಬುದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ನಾವು, ಆತನ ಪವಿತ್ರಾತ್ಮನ ಪ್ರಮಾಣೀಕರಣ ಮತ್ತು ರಾಜಿ ಹೊಂದದ, ಅಭಿಷೇಕಹೊಂದಿದ ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕಕಾರ್ಯ, ಅದ್ಭುತಕಾರ್ಯ, ಮಹತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವುದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ. (1 ಕೊರಿಂಥದವರಿಗೆ 2: 4,5, ಇಬ್ರಿಯರಿಗೆ 2: 3,4.) ಯೇಸು ನಮ್ಮ ಉದ್ದೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ  ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆ ನಮ್ಮ ಗುರಿಯಾಗಿದೆ.

ಆಲ್‌ಪೀಪಲ್ಸ್ ಸಭೆಯು ಭಾರತದಲ್ಲಿ ಅನೇಕ ಸಭೆಗಳನ್ನು ಹೊಂದಿದೆ ಮತ್ತು ಹೊಸ ಸಭೆಗಳು ನಿಯತಕಾಲಿಕವಾಗಿ ಸ್ಥಾಪಿಸಲ್ಪಡುತ್ತಿವೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಗಳನ್ನು ಪಡೆದುಕೊಳ್ಳಲು, ನಮ್ಮ ವೆಬ್‌ಸೈಟ್‌ನ್ನು ಸಂಪರ್ಕಿಸಿರಿ. www. apcwo.org ಅಥವಾ contact@apcwo.org ಗೆ ಇ-ಮೇಲ್ ಕಳುಹಿಸಿರಿ.

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದಿರೋ?

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು.

ಆತನು ಪಾಪರಹಿತ ಜೀವನ ನಡಿಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ - ಯೇಸು ಭೂಲೋಕದಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕಿವಿಕೇಳುವಂತೆ ಮಾಡಿದನು. ಕುಂಟರನ್ನು ನಡೆದಾಡುವಂತೆ ಮಾಡಿದನು. ಎಲ್ಲಾ ಬಗೆಯ ರೋಗಗಳನ್ನು ವಾಸಿಮಾಡಿದನು. ಹಸಿದ ಜನರಿಗೆ ಐದುರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು. ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಅದ್ಭುತ ಕಾರ್ಯಗಳು ನಮಗೆ ದೇವರು, ಒಳ್ಳೆಯ ದೇವರು, ಆತನು ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಬಯಸುತ್ತಾನೆ. ದೇವರು, ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ಪ್ರಕಟಿಸುತ್ತವೆ.**

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಅಂಗೀಕಾರವಾಗದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು, ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವುದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಕೆಗೊಳಿಸುತ್ತದೆ. ಅಥವಾ ದೂರಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೇನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು ''ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರವ ನಿತ್ಯಜೀವ'' ಎಂದು ಹೇಳುತ್ತದೆ (ರೋಮಪುರ 6:23) ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆಮಾಡಿದ್ದಾನೆ. ಮೂರನೇ ದಿನದಲ್ಲಿ ಎದ್ದು ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು. ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ, ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ನಿಮ್ಮಂತೆಯೇ, ಜನರನ್ನು ಪಾಪದಿಂದ, ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ. ನೀನು ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಮತ್ತು ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

**''ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು''** (ಅಪೊಸ್ತಲರ ಕೃತ್ಯ 10:43)

**''ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬುದೇ''** (ರೋಮಾಪುರದವರಿಗೆ 10:9)

ನೀವು ಸಹ ಯೇಸುಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪರಿಹಾರಗಳನ್ನು ಹೊಂದಿಕೊಳ್ಳಬಹುದು. ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವುದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧೀಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.

*ಪ್ರಿಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದ್ದನ್ನು ಅರ್ಥ ಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರ್‍ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮಾಪಣೆ ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವುದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ ನೀನು ಮಾಡಿದ್ದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನು ರಕ್ಷಿಸಿಕೊಳ್ಳಲು ಆಗುವುದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

*ಈ ದಿನ ನಾನು ನನ್ನ ಹೃದಯದಿಂದ ನಂಬಿ ನನ್ನ ಬಾಯಿಂದ, ''ನೀನು ನನಗಾಗಿ ಸತ್ತೇ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ. ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧೀಕರಣ ಪಡೆದುಕೊಂಡೆ'' ಎಂದು ಹೇಳುತ್ತೇನೆ.*

*ಯೇಸುವೇ ನಿನಗೆ ವಂದನೆಗಳು. ನಿನ್ನನ್ನು ಪ್ರೀತಿಸಲು ಸಹಾಯ ಮಾಡು. ನಿನ್ನನ್ನು ಇನ್ನೂ ತಿಳಿಯಲು ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯಮಾಡು. ಆಮೇನ್*

DOWNLOAD THE FREE APP!

*Search for*
"All Peoples Church Bangalore"
in the App or Google play stores.

Available on the App Store

ANDROID APP ON Google play







*A daily 5-minute video devotional.*
*A daily Bible reading and prayer guide.*
*5-minute Sermon summary.*
*Toolkit with Scriptures on various topics to build faith and information to share the Gospel.*
*Resources with sermons, sermon notes, TV programs, books, music and more.*

*IF YOU LOVE IT, TELL OTHERS ABOUT IT!*

# ಆಲ್ ಪೀಪಲ್ಸ್ ಚರ್ಚ್
# ಸತ್ಯವೇದ ಶಾಲೆ ಮತ್ತು ಸೇವಾ ತರಬೇತಿ ಕೇಂದ್ರ

ಆಲ್ ಪೀಪಲ್ಸ್ ಸಭೆಯ ಸತ್ಯವೇದ ಶಾಲೆ ಮತ್ತು ಸೇವಾ ತರಬೇತಿ ಕೇಂದ್ರವು (APC-BC) ಭಾರತದ ಬೆಂಗಳೂರಿನಲ್ಲಿದೆ. ದೇವರ ವಾಕ್ಯದ ಬೌದ್ಧಿಕವಾದ ಉತ್ತೇಜಿಸುವಿಕೆಯ ಅಧ್ಯಯನ ಮತ್ತು ಸಿದ್ಧಾಂತಗಳ ಉತ್ತಮವಾದ ದೈವಿಕ ಸಿದ್ಧಾಂತಗಳೊಡನೆ ಪವಿತ್ರಾತ್ಮನ ಅತ್ಯದ್ಭುತಕರವಾದ ಬಲದಲ್ಲಿ ಸೇವೆ ಮಾಡಲೂ ಸಜ್ಜುಗೊಳಿಸುವುದು ಮತ್ತು ಆತ್ಮನಿಂದ ತುಂಬಿದ ಅಭಿಷೇಕ ಹೊಂದಿದ್ದು - ತರಬೇತಿಯನ್ನು ಪಡೆದುಕೊಳ್ಳುವುದನ್ನು ಒದಗಿಸುತ್ತೇವೆ. ಒಬ್ಬ ವ್ಯಕ್ತಿಯನ್ನು ದೈವಿಕ ಗುಣನಡತೆಗೆ ಒತ್ತು ನೀಡುವಂತಹ ಸೇವೆಗಾಗಿ, ದೇವರ ವಾಕ್ಯದಲ್ಲಿ ಆಳವಾಗಿ ಬೇರೂರುವುದಕ್ಕಾಗಿ, ಮತ್ತು ಕರ್ತನೊಂದಿಗಿನ ನಿಕಟವಾದ ಸಂಬಂಧದಲ್ಲಿ ಹೊರ ಹರಿಯುವಂತಹ ಅದ್ಭುತಗಳು, ಸೂಚಕ ಕಾರ್ಯಗಳು ಮತ್ತು ಮಹತ್ಕಾರ್ಯಗಳನ್ನು ಬಲಯುತವಾಗಿ ಪ್ರದರ್ಶಿಸಲು ಅವರನ್ನು ಅಭಿವೃದ್ಧಿಪಡಿಸುವುದನ್ನು ನಾವು ನಂಬುತ್ತೇವೆ.

ಏ.ಪಿ.ಸಿ-ಬಿ.ಸಿ.ಯಲ್ಲಿ ಉತ್ತಮವಾದ ಬೋಧನೆಗಳ ಜೊತೆಗೆ ದೇವರ ಪ್ರೀತಿಯನ್ನು ಪ್ರದರ್ಶಿಸುವುದು, ಅಭಿಷೇಕ ಮತ್ತು ಪವಿತ್ರಾತ್ಮನ ಪ್ರಸನ್ನತೆ ಮತ್ತು ದೇವರ ವಾಕ್ಯದ ಅತ್ಯದ್ಭುತಕರ ಕಾರ್ಯಗಳಿಗೆ ನಾವು ಒತ್ತು ಕೊಡುತ್ತೇವೆ. ಅನೇಕ ಯುವ ಪುರುಷ ಮತ್ತು ಸ್ತ್ರೀಯರು ತರಬೇತಿ ಹೊಂದಿದ್ದಾರೆ ಮತ್ತು ಅವರ ಜೀವಿತಗಳ ಮೇಲೆ ದೇವರ ಕರೆಯನ್ನು ನೆರವೇರಿಸಲು ಕಳುಹಿಸಲ್ಪಟ್ಟಿದ್ದಾರೆ.

ನಾವು ಮೂರು ಕಾರ್ಯಕ್ರಮಗಳನು ನೀಡುತ್ತೇವೆ:

ಒಂದು ವರ್ಷದ ಸರ್ಟಿಫಿಕೇಟ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (C.Th.)
ಎರಡು ವರ್ಷದ ಡಿಪ್ಲೋಮ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ(D.Th.)
ಮೂರು ವರ್ಷದ ಬ್ಯಾಚುಲರ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (B.Th.)

ತರಗತಿಗಳು ವಾರದ ಪ್ರತಿದಿನ ಸೋಮವಾರದಿಂದ ಶುಕ್ರವಾರ ಬೆಳಿಗ್ಗೆ 9 ರಿಂದ ಮಧ್ಯಾಹ್ನ 1ರವರೆಗೆ ಜರುಗುತ್ತದೆ. ದಿನದ ವಿದ್ಯಾರ್ಥಿಗಳು, ಕೆಲಸ ಮಾಡುವ ವೃತ್ತಿಪರರು ಮತ್ತು ಮನೆಯಲ್ಲಿ ಇರುವವರು ಇಂತಹ ತರಗತಿಗಳಿಗೆ ಹಾಜರಾಗಬಹುದು ಮತ್ತು ಮಧ್ಯಾಹ್ನ 1 ರ ನಂತರ ಅವರ ಕೆಲಸಗಳನ್ನು ಮುಂದುವರೆಸಬಹುದು.

ವಸತಿನಿಲಯ ಇಚ್ಛಿಸುವಂತಹ ವಿದ್ಯಾರ್ಥಿ / ವಿದ್ಯಾರ್ಥಿನಿಯರುಗಳಿಗೆ ಪ್ರತ್ಯೇಕ ವಸತಿ ವ್ಯವಸ್ಥೆ ದೊರೆಯುತ್ತದೆ. ವಿದ್ಯಾರ್ಥಿಗಳು ಸೇವಾಕಾರ್ಯಗಳು ವಿಶೇಷ ಸಮಾವೇಶಗಳು ಮಧ್ಯಾಹ್ನದ ಅವಧಿಗಳಲ್ಲಿ ಪ್ರಾರ್ಥನೆ ಮತ್ತು ಆರಾಧನೆ ಸಮಯದಲ್ಲಿ ಪ್ರತಿವಾರದ ದಿನ ಮಧ್ಯಾಹ್ನ 2 ರಿಂದ 5ರವರೆಗೆ ಭಾಗವಹಿಸಬೇಕು. ಮಧ್ಯಾಹ್ನದ ತರಗತಿಗಳು ದಿನದ ವಿದ್ಯಾರ್ಥಿಗಳಿಗೆ (ವಸತಿ ಬಯಸದ) ಐಚ್ಛಿಕ ವಿಷಯವಾಗಿದೆ. ಎಲ್ಲಾ ವಿದ್ಯಾರ್ಥಿಗಳು ವಾರಾತ್ಯಂದ ದಿನದಲ್ಲಿ ಒಂದು ಅಥವಾ ಅನೇಕ ಸ್ಥಳೀಯ ಸಭೆಗಳಲ್ಲಿ ಸೇವೆ ಮಾಡಲು ಪ್ರೋತ್ಸಾಹಿಸಲಾಗುತ್ತದೆ.

ಸತ್ಯವೇದ ಶಾಲೆ, ಕೊಡಲ್ಪಟ್ಟಂತಹ ವಿವಿಧ ಕಾರ್ಯಕ್ರಮಗಳು, ಕಲಿಕಾ ವಿಷಯಾಂಶಗಳು ಮತ್ತು ಅರ್ಜಿಯನ್ನು ಡೌನ್‌ಲೋಡ್ ಮಾಡಲು apcwo.org/biblecollege ಅನ್ನು ಸಂಪರ್ಕಿಸಿರಿ.

APC-BC is accredited by the
Nations Association for Theological
Accreditation (NATA).

ನಾವೆಲ್ಲರೂ ಇನ್ನೂ ಅಪರಿಪೂರ್ಣರಾಗಿರುವುದರಿಂದ ತಪ್ಪುಗಳನ್ನು ಮಾಡುವುದು ಸತ್ಯಕರವಾಗಿದೆ. ನಾವು ಮೊದಲ ಬಾರಿಗೆ ಸಂಧಿಸುವ ಪರಿಸ್ಥಿತಿಗಳಲ್ಲಿ ತಪ್ಪು ನ್ಯಾಯತೀರ್ಪುಗಳು ತೀವ್ರವಾದ ಪರಿಣಾಮಗಳನ್ನು ಹೊಂದಿವೆ. ನಮಗಾಗಿ ಇರುವ ದೇವ ಯೋಜನೆಗಳನ್ನು ನಮ್ಮ ತಪ್ಪು ಆಯ್ಕೆಗಳು ಹೇಗೆ ಹಾನಿಪಡಿಸುತ್ತವೆ? ನಮ್ಮ ತಪ್ಪು ಆಯ್ಕೆಗಳು ನಮ್ಮ ಜೀವಿತದಲ್ಲಿ ನೆರವೇರಿಸಲ್ಪಡುವ ಉತ್ತಮವಾದವುಗಳಿಂದ ಮತ್ತು ಯಾವುದಾದರೂ ರೀತಿಯಲ್ಲಿ ದೇವರ ಉನ್ನತತೆಯನ್ನು ಅಡ್ಡಿಪಡಿಸುವುದರಲ್ಲಿ ಸೋಲು, ಅಥವಾ ಮಾರ್ಪಾಟು ಮಾಡುತ್ತವೆಯಾ?

ಈ ಪುಸ್ತಕವು ನಮ್ಮ ಕ್ರಿಸ್ತೀಯ ನಂಬಿಕೆಯ ಪ್ರಾಯೋಗಿಕ ಕಡೆಯಲ್ಲಿ ನಮ್ಮನ್ನು ಎಚ್ಚರಗೊಳಿಸಲು ಉದ್ದೇಶಿಸಲ್ಪಟ್ಟಿದೆ. ನಮ್ಮ ಜೀವಿತಗಳಿಗಿರುವ ದೇವರ ಯೋಜನೆ ನೆರವೇರಿಸುವುದರಲ್ಲಿ ನಮ್ಮ ಗಂಭೀರ ಜವಬ್ದಾರಿಯನ್ನು ನಾವು ಅರ್ಥ ಮಾಡಿಕೊಳ್ಳಲು ಉದ್ದೇಶಿಸಲ್ಪಟ್ಟಿದೆ. ನಮ್ಮ ಕ್ರಿಯೆಗಳನ್ನು ಆತ್ಮಿಕಗೊಳಿಸುವುದನ್ನು ನಿಲ್ಲಿಸಲು ಒಂದು ಕರೆ ಇದಾಗಿದೆ ಮತ್ತು ಅವರಿಗಾಗಿ ಜವಬ್ದಾರಿಯನ್ನು ಊಹಿಸುವುದಾಗಿದೆ. ಈ ಜೀವಿತದ ವ್ಯವಹಾರಗಳಲ್ಲಿ 'ಜಾಣರಾಗುವಂತೆ' ಇದು ಒಂದು ನೀತಿ ಬೋಧೆಯಾಗಿದೆ.

ಆಶಿಷ್ ರಾಯ್‌ಚೂರ್

**All Peoples Church & World Outreach**
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617
Email: contact@apcwo.org
Website: apcwo.org